# ಜಹಾಂಗೀರ

# 1605-1627

1. ಪೀಠಿಕೆ
2. ಪ್ರಾರಂಭಿಕ ಜೀವನ.
3. ಪ್ರಾರಂಭಿಕ ಘಟನೆಗಳು.
4. ಸಿಂಹಾಸನ ರೋಹಣ.
5. ಆರಂಭಿಕ ಆಡಳಿತದ ಘೋಷಣೆಗಳು.
6. ಪ್ರಾರಂಭಿಕ ತೊಂದರೆಗಳು.
7. ಸೈನಿಕ ಸಾಧನೆಗಳು.
8. ಕೊನೆಯ ದಿನಗಳು ಮತ್ತು ಮರಣ
9. ಜಹಾಂಗೀರನ ಜೀವನದಲ್ಲಿ ನೂರಜಹಾನಳ ಪಾತ್ರ.
10. ರಾಜಕೀಯ ಒಳಸಂಚುಗಳು
11. ವ್ಯಕ್ತಿತ್ವ ಮತ್ತು ವಿಮರ್ಶೆ.

**1. ಪೀಠಿಕೆ**

ಜಹಾಂಗೀರನ ಮೊದಲ ಹೆಸರು ಮಹಮ್ಮದ್ ಸಲೀಮ್. ಅಕ್ಬರನ ಮರಣದ ನಂತರ ಅಂದರೆ 1605 ರಿಂದ 1627 ರವರೆಗೆ ಹಿಂದೂಸ್ತಾನದ ಚಕ್ರವರ್ತಿಯಾಗಿ ಆಡಳಿತ ಮಾಡಿದನು. ಸಮಾಜಿಕ ನ್ಯಾಯಾ, ಸಮಾನನ್ಯಾಯಾಕ್ಕಾಗಿ ಇತಿಹಾಸದಲ್ಲಿ ಪ್ರಸಿದ್ಧನಾಗಿದ್ದಾನೆ.

ಇವನೊಬ್ಬ ವೀರಯೋಧನು. ಮಹಾಮೇಧಾವಿ, ನಿಸರ್ಗಪ್ರೇಮಿ, ಚಿತ್ರಕಲಾಪ್ರೇಮಿ, ಸೌಂದ್ಯರ್ಯ-ಉಪಾಸಕ, ನಿಷ್ಠಾವಂತಪ್ರೇಮಿ-ಪ್ರೀಯತಮನಾಗಿದ್ದನು. ಅಫೀಮ, ಮದ್ಯಸೇವನೆ, ಐಷಾರಾಮಿ, ಆಲಸಿ, ಸ್ತ್ರೀಲೋಲ, ಇವನ ದೌರ್ಬಲ್ಯಗಳಾಗಿದ್ದವು. ಇವನ ಪ್ರೀಯತಮೇ ಪ್ರೀತಿಯ ಹೆಂಡತಿ ನೂರಜಹಾನ ಇವನ ಜೀವನದಲ್ಲಿ ಮಹತ್ವದ ಪಾತ್ರ ವಹಿಸಿದ್ದಾಳೆ.

**2. ಪ್ರಾರಂಭಿಕ ಜೀವನ.**

ಅಕ್ಬರನಿಗೆ ಬಹಳಷ್ಟುದಿನಗಳವರೆಗೆ ಮಕ್ಕಳಾಗಲಿಲ್ಲ ಕಾರಣ ಇವನು ಅಜಮೀರದ ಖ್ವಾಜಾ ಮೋಹಿನೂದ್ದಿನ್ ಷೇಕ್ ಸಲೀಮ್ ಚಿಸ್ತಿಯ ದರ್ಗಕ್ಕೆ ಪ್ರಾರ್ಥನೆ ಸಲ್ಲಿಸಿದನು. ಅವನ ಅನುಗ್ರಹದಿಂದ ಇವನ ಪ್ರೀತಿಯ ಹೆಂಡತಿ ಅಂಬರದ (ಜೈಪುರ) ರಾಜಕುಮಾರಿ ಜೋದಾಬಾಯಿ

(ಮರಿಯಮ್-ಉಜ್ ಜಮಾನಿ) ಗೆ 1569 ಅಗಸ್ಟ 30 ರಂದು ಒಂದು ಗಂಡುಮಗು ಜನನವಾಯಿತು. ಈ ಮಗುವಿಗೆ ಮಹಮ್ಮದ ಸಲೀಮ್ ಎಂದು ನಾಮಕರಣ ಮಾಡಲಾಯಿತು. ಅಕ್ಬರನು ತನ್ನ ಮಗನನ್ನು ಪ್ರೀತಿಯಿಂದ ಶೈಕುಬಾಬಾ ಎಂದು ಕರೆಯುತ್ತಿದ್ದನು. ನಂತರದಲ್ಲಿ ಬೇರೆ, ಬೇರೆ ರಾಣಿಯರಲ್ಲಿ ಮುರಾದ ಮತ್ತು ಧನಿಯಾಲ ಎಂಬ ಮಕ್ಕಳು ಜನಿಸಿದರು. ಹೀಗೆ ಅಕ್ಬರಿಗೆ ಸಲೀಮ್, ಮುರಾದ, ಮತ್ತು ಧನಿಯಾಲ ಎಂಬ ಮೂರುಜನ ಮಕ್ಕಳಿದ್ದರು.

ಚಕ್ರವರ್ತಿ ಅಕ್ಬರನು ತನ್ನ ಪುತ್ರರ ವಿದ್ಯಾಭ್ಯಾಸವನ್ನು ಪ್ರತ್ಯೇಕ ಅರಮನೆಯಲ್ಲಿ 1573 ನವ್ಹಂಬರ 28 ರಿಂದ ಪ್ರಾರಂಭಿಸಿದನು. ಉಸ್ತಾದ ಅಬ್ದುಲ್ ರಹೀಮ್ ಖಾನ ಎಂಬ ಮಹಾ ಮೇದಾವಿಯನ್ನ ಶಿಕ್ಷಕನಾಗಿ ನೇಮಕಮಾಡಿದನು. ತುರ್ಕಿ, ಅರೇಬಿಕ್, ಪರ್ಶಿಯನ್, ಹಿಂದಿ ಭಾಷೆಗಳನ್ನು ಮತ್ತು ಇತಿಹಾಸ, ತತ್ವಜ್ಞಾನ, ಗಣಿತ, ಖಗೋಳ, ಆಡಳಿತ, ಅರ್ಥಶಾಸ್ತ್ರಗಳನ್ನು ಆಸಕ್ತಿಯಿಂದ

ಕಲಿತನು. ಜೋತೆಗೆ ಕತ್ತಿವರೆಸೆ, ಕುದರೆಸವಾರಿ, ಬಿಲ್ಲುವಿದ್ಯೆ, ಸಿಡಿಮದ್ದಿನ ಪ್ರಯೋಗಗಳನ್ನು ಕಲಿತನು. ಚಿತ್ರಕಲೆ, ಸಂಗೀತ, ನೃತ್ಯಗಳಲ್ಲಿ ವಿಶೇಷ ಆಸಕ್ತಿಯನ್ನು ಹೊಂದಿದ್ದನು. ಚಿಕ್ಕ ವಯಸ್ಸಿನಲ್ಲಿಯೇ ಅಫೀಮ ಮತ್ತು ಮದ್ಯೆದ ದಾಸನಾದನು.

**3. ಪ್ರಾರಂಭಿಕ ಘಟನೆಗಳು.**

- 1581 ರಲ್ಲಿ 12 ನೇಯ ವಯಸ್ಸಿನಲ್ಲಿಯೇ ಕಾಬೂಲಿನ ದಂಡಯಾತ್ರೆಯಲ್ಲಿ ಬಾಗವಹಿಸಿದನು.
- 1585 ರವರೆಗೆ ಅನೇಕ ಯುದ್ಧಗಳಲ್ಲಿ ಬಾಗವಹಿಸಿ, ರಣರಂಗದಲ್ಲಿ ಕಳೆದನು.
- 1585 ರಲ್ಲಿ ಇವನ ಸಹಾಸ, ದಿಗ್ವಿಜಯಗಳನ್ನು ಮೆಚ್ಚಿ ಅಕ್ಬರನು ಮಗನಿಗೆ 10,000 ಅಶ್ವಗಳ ಮನ್ ಸಬ್ದಾರನನ್ನಾಗಿ ನೇಮಕ ಮಾಡಿದನು.
- 1585 ರಲ್ಲಿ 16 ನೇ ವಯಸ್ಸಿನಲ್ಲಿ ರಾಜಾ ಭಗವನದಾಸನ ಮಗಳಾದ ಮನಬಾಯಿಯ ಜೋತೆ ಮದುವೆ. 1587ರಲ್ಲಿ ಖುಸ್ರೂ, 1589 ರಲ್ಲಿ ಫರ್ವಿಜ್ ಎಂಬ ಮಕ್ಕಳ ತಂದೆಯಾದನು.
- 1587 ರಲ್ಲಿ ರಾಜಾಉದಯಸಿಂಗನ ಮಗಳಾದ ಜಗತ್ ಗೋಸಾಮಿ (ಜೋದಾಬಾಯಿ) ಯನ್ನು ಮದುವೆಯಾದನು. ಇವಳಿಗೆ 1590 ರಲ್ಲಿ ಖುರ್ರಮ್ ಎಂಬ ಮಗ ಜನಿಸಿದನು.
- 1597 ರವರೆಗೆ ಸಲೀಮ್‌ನು 20 ಕನ್ಯೆಯರನ್ನು ಮದುವೆಯಾದನು. (28 ವಯಸ್ಸು)
- ಇವನ ಅರಮನೆಯಲ್ಲಿ 800 ಜನ ಸ್ತ್ರೀಯರು ಉಪಪತ್ನಿಯರಾಗಿದ್ದರು.
- ತಂದೆಯ ಅತಿಯಾದ ಪ್ರೀತಿ, ಅತೀಯಾದ ಸೌರ್ಯಗಳಿಂದಾಗಿ ಇವನೊಬ್ಬ ಮದ್ಯವೆಸನಿಯಾಗಿ, ಸ್ತ್ರೀಲೋಲನಾಗಿ, ಜೂಜುಕೋರನಾಗಿ, ಆಲಸಿಯಾಗಿ, ದುಷ್ಟಗುಂಪಿನ ನಾಯಕನಾಗಿ ಬೆಳೆದನು.
- ಹೋಣೆಗಾರಿಕೆ, ಕರ್ತವ್ಯಗಳನ್ನು ಮರೆತ ಮಗನಿಗೆ ಅಕ್ಬರನು ಬುದ್ದಿವಾದ ಹೇಳಲು ಪ್ರಯತ್ನಿಸಿ ವಿಫಲನಾದನು.
- ದಕ್ಷಿಣದ ಅಹಮದನಗರ ಯುದ್ಧದಲ್ಲಿ ಭಾಗವಹಿಸುವಂತೆ ಮಗನಿಗೆ ಆಜ್ಞೆ ಕಳುಹಿಸಿದನು. ಆದರೆ ರಾಜಾಜ್ಞೆಯನ್ನು ತಿರಸ್ಕರಿಸಿ ಆಗ್ರಾದಲ್ಲಿಯೇ ಉಳಿದನು.
- 1596 ರಲ್ಲಿ ಅಕ್ಬರನ ಕೊಲೆ ಪ್ರಯತ್ನದ ಅಪಾದನೆಯಿಂದ ತಂದೆ-ಮಕ್ಕಳಲ್ಲಿ ಅವಿಶ್ವಾಸ ಉಂಟಾಗಿ ಸಲೀಮ್ ನು ಅಲಹಾಬಾದಗೆ ಬಂದು ನೆಲಸಿದನು.
- ಕ್ರಿ.ಶ.1599 ರಲ್ಲಿ ಮೇವಾರದ ಮೇಲೆ ದಾಳಿ ಮಾಡುವ ತಂದೆಯ ಆಜ್ಞೇಯನ್ನು ತಿರಸ್ಕರಿಸಿದನು.
- 1601 ರಲ್ಲಿ ಅಕ್ಬರನ ಮೆಚ್ಚಿನ, ಶ್ರದ್ಧ್ಯಯ ಶ್ರೀಮಂತನಗರವಾದ ಆಜಮೀರನ್ನು ಲೂಟಿ ಮಾಡಿಸಿದನು. ಸುಮಾರು ಒಂದು ಕೋಟಿ ನಗದು, ಅಪಾರ ಪ್ರಮಾಣದ ವಜ್ರ, ಚಿನ್ನ. ಶೇಖರಿಸಿಕೊಂಡು ಅಲಹಾಬಾದನಲ್ಲಿ ತಾನು ಮೊಘಲರ ಬಾದಶಹಾ ಎಂದು ಘೋಷಿಸಿಕೊಂಡನು.
- ಬುದ್ಧಿವಾದ ಹೇಳಲೂ ಬಂದ ಅಕ್ಬರನ ಆತ್ಮೀಯ ಮಿತ್ರನಾದ ಅಬುಲ್‌ಫಜಲನನ್ನು, ಭೀಮಸಿಂಗದೇವನಿಂದ ಕ್ರಿ.ಶ.1602 ರಲ್ಲಿ ಕೊಲ್ಲಿಸಿದನು.
- ಕೊಪಗೊಂಡ ಅಕ್ಬರನು ಮಗ ಸಲೀಮ್‌ನನ್ನು ದಂಡಿಸಲು ಸರ್ವಸಿದ್ದತೆ ಮಾಡಿಕೊಂಡನು.
- ಅಕ್ಬರನ ಮೊಮ್ಮಗ ಸಲೀಮ್‌ನ ಮಗ ಖುಸ್ರವನ್ನು ಸಿಂಹಾಸನಕ್ಕೆ ತರುವ ಪ್ರಯತ್ನಗಳು ನಡೆದಿದ್ದವು
- ತದೇ ಸಮಯದಲ್ಲಿ 1603 ರಲ್ಲಿ ಅಕ್ಬರನ ಎರಡನೇಯ ಮಗ ಮುರಾದನು ಮರಣಹೊಮದಿದ್ದನು.
- ಮೂರನೆಯ ಮಗ ಧನಿಯಾಲ ಮರಣಾಂತಿಕ ಕಾಯಿಲೆಯಿಂದ ಮರಣದಂಚಿನಲ್ಲಿದ್ದನು.(1604 ರಲ್ಲಿ ಮರಣ)
- 1063 ರಲ್ಲಿ ಸಾಕುತಾಯಿ ಸಲೀಮಾ ಬೇಗಂಳ ಮದ್ಯಸ್ಥಿಕೆಯಲ್ಲಿ ತಂದೆ-ಮಕ್ಕಳಲ್ಲಿ ರಾಜಿ ಮಾಡಿದಳು. ಮತ್ತು ಸಲೀಮ್ ನನ್ನು ಉತ್ತರಾಧಿಕಾರಿ ಎಂದು ಘೋಷಿಸಲಾಯಿತು.

**4. ಸಿಂಹಾಸನ ರೋಹಣ.**

1605 ರಲ್ಲಿ ಅಕ್ಬರನು ಮರಣದಂಚಿನಲ್ಲಿದ್ದಾಗ ರಾಜಧಾನಿಯಲ್ಲಿ ಎರಡು ಬಣಗಳು ಉಂಟಾದವು. ಸಲೀಮ್ ನದು ಒಂದು ಬಣ ಇನ್ನೊಂದು ಅವನ ಮಗ ಖುಸ್ರುವಿನ ಬಣ 1605 ಅಕ್ಟೋಬರ 25 ರಂದು ಮರಣ ಹೊಂದಿದಮೇಲೆ ಅವನ ಪೇಟ ಮತ್ತು ಖಡ್ಗವನ್ನು ಸಲೀಮನಿಗೆ ತೊಡಿಸಿ ಉತ್ತರಾಧಿಕಾರಿ ಎಂದು ಘೋಷಿಸಲಾಯಿತು. ಎಂಟು ದಿನಗಳ ಶೋಕಾಚರಣೆಯ ನಂತರ 1605 ನವ್ಹಂಬರ 3 ರಂದು ಆಗ್ರಾದ ಅರಮನೆಯಲ್ಲಿ ಸಿಂಹಾಸನಾರೋಹಣದ ಸಮಾರಂಭವು ವಿಜೃಂಭಣೆಯಿಂದ ಆಚಾರಿಸಲಾಯಿತು. ಸಲೀಮನು " ನೂರುದ್ದೀನ್ ಮಹಮ್ಮದ್ ಜಹಾಂಗೀರ ಬಾದಶಹ ಘಾಜಿ " ಎಂಬ ಬಿರುದುನ್ನು ಧರಿಸಿದನು.

**5. ಪ್ರಾರಂಬಿಕ ತೊಂದರೆಗಳು.**

1) ಜನರ- ಸರದಾರರ ಪ್ರೀತಿ, ಸಹಕಾರ, ವಿಶ್ವಾಸ ಗಳಿಸುವದು.

2) ಆಡಳಿತವನ್ನು ಕೈಗೆ ತಗೆದು ಕೊಳ್ಳುವದು.

3) ನ್ಯಾಯಾಂಗವನ್ನು ಸರಿ ಪಡಿಸುವದು.

4) ಮಗ ಖುಸ್ರುವನ್ನು ನಿಯಂತ್ರಿಸುವದು.

5) ವಿರೋಧಿಗಳನ್ನು ಹತ್ತಿಕ್ಕುವದು.

6. ಆರಂಬಿಕ ಆಡಳಿತದ ಘೋಷಣೆಗಳು.

ತನ್ನ ತಂದೆಯೊಂದಿಗೆ ವರ್ತಿಸಿದ ನೀತಿಯಿಂದ ಅಪ್ರೀಯನಾಗಿದ್ದ ಜಹಾಂಗೀರನು ಸಿಂಹಾಸನ ಅಲಂಕರಿಸಿದ ಮೇಲೆ ತನ್ನ ಸರದಾರರಿಗೆ, ಮಹಾದಂಡನಾಯಕರಿಗೆ, ಮನ್‌ಸಬ್ದಾರರಿಗೆ, ವಿದ್ವಾಂಸರಿಗೆ, ಜನಪ್ರತಿನಿಧಿಗಳಿಗೆ, ಬಿರುದುಗಳನ್ನು, ಮತ್ತು ಕಾಣಿಕೆಗಳನ್ನು ನೀಡಿ ಗೌರವಿಸಿದನು.

1. ಕೊಲೆಯಾದ ಅಬುಲ್ ಫಜಲ್ ನ ಮಗ ಅಬ್ದುಲ್ ರಹೆಮಾನನಿಗೆ 2000 ಮನ್ಸಬ್ದಾರನಾಗಿ ನೇಮಕ.
2. ಮಾನಸಿಂಗ್ ನ ಮಗ ಮಹಾಸಿಂಗ್ ನಿಗೆ 2000 ಮನ್ಸಬ್ದಾರನಾಗಿ ನೇಮಕ.
3. ಅಬುಲ್ ಫಜಲನನ್ನು ಕೊಂದ ಭೀರಸಿಂಗ ಬುಂದೇಲನಿಗೆ 3000 ಸನ್ಸಬ್ದಾರನಾಗಿ ನೇಮಕ.
4. ಮಿರ್ಜಾ ಘಯಾಸ್ ಬೇಗ್ ನಿಗೆ (ನೂರಜಹಾನಳ ತಂದೆ) ಕಂದಾಯಮಂತ್ರಿಯಾಗಿ ನೇಮಕ.
5. ಮಹಬತ್ ಖಾನ (ಖುಸ್ರುವಿನ ನೆಚ್ಚಿನ ಗೆಳೆಯ) ಮಹಾದಂಡನಾಯಕನಾಗಿ ನೇಮಕ.
6. ಮಿರ್ಜಾ ಅಜೀಜ್ ಕೋಕ್ ( ಖುಸ್ರುವಿನ ಬೆಂಬಲಿಗ) 5000 ಮನ್ಸಬ್ದಾರನಾಗಿ ಮತ್ತು ಆರ್ಥಿಕಮಂತ್ರಿಯಾಗಿ ನೇಮಕ.
7. ಖುಸ್ರುನನ್ನು ಕ್ಷಮಿಸಿ, 10000 ಮನ್ಸಬ್ದಾರನಾಗಿ ನೇಮಿಸಿ, ಗೃಹ ಬಂಧನದಲ್ಲಿ ಇಟ್ಟನು.

ಸಾಮಾನ್ಯರಿಗಾಗಿ 12 ಜನಪ್ರೀಯ ನೀತಿಯನ್ನು ಘೋಷಣೆಮಾಡಿದನು.

1. ಜಕಾತ್, ತಮಘಾ, ಮೀರಬಹರ್, ಆಸ್ತಿ ವರ್ಗಾವಣೆ ಎಂಬ ತೆರಿಗೆಗಳ ರದ್ದು.
2. ಪ್ರಯಾಣಿಕರ ಅನುಕೂಲಕ್ಕಾಗಿ ಹೆದ್ದಾರಿಗಳ ನಿರ್ಮಾಣ, ಅದರ ಪಕ್ಕದಲ್ಲಿ ಗಿಡಗಳನ್ನು, ಮಸೀದಿಗಳನ್ನು, ಸರಾಯಿಗಳನ್ನು ನಿರ್ಮಿಸಲು ಆಜ್ಞೆ.
3. ನ್ಯಾಯಾದ ಗಂಟೆ ಸ್ಥಾಪನೆ. ಷಾಬುರ್ಜಿ ಕೋಟೆಯಲ್ಲಿ ದೊಡ್ಡ ಗಂಟೆಯನ್ನು ಕಟ್ಟಿ ಅದಕ್ಕೆ ಚಿನ್ನದ ಸರಪಳಿ ಕಟ್ಟಿದನು. ಅನ್ಯಾಯ ಒಳಗಾದ ಅತಿಯಾದ ಸಾಮಾನ್ಯವಾದ ವ್ಯಕ್ತಿ ಕೂಡ ನ್ಯಾಯ ಪಡೆಯಲು ಯಾವುದೇ ಸಮಯದಲ್ಲಿ ಸರಪಳಿ ಎಳೆದು ಗಂಟೆಬಾರಿಸಿ ಬಾದಷಹನಿಂದ ನ್ಯಾಯಾ ಪಡೆಯಬಹುದು.
4. ವರ್ತಕರಿಗೆ ಉಚಿತವಾಗಿ ಪರವಾನಿಗೆ ನೀಡುವದು.
5. ಮಾದಕ ವಸ್ತುಗಳ ತಯಾರಿಕೆ ಮತ್ತು ಮಾರಾಟ ನಿಷೇಧ ಖುಸ್ರುವಿನ ದಂಗೆಯ ದಮನ

6. ಸರಕಾರದ ಆಧಿಕಾರಿಗಳು, ಜಮಿನ್ದಾರರು, ರೈತರ ಜಮಿನುಗಳನ್ನು ಬಲತ್ಕಾರದಿಂದ ವಶ ಪಡಿಸಿಕೊಳ್ಳುವದು ನಿಷೇಧ.

7. ಅಪರಾಧಿಗಳ ಕಣ್ಣು, ಕಿವಿ, ಮೂಗು ಕತ್ತರಿಸುವ ಅಂಗವಿಚ್ಛೇಧನೆ ಶಿಕ್ಷೆಯನ್ನು ರದ್ದು ಪಡಿಸಿದನು.

8. ಪ್ರಜೆಗಳ ಆರೋಗ್ಯ ಕಾಪಾಡಲು ನಗರ ಮತ್ತು ಪಟ್ಟಣಗಳಲ್ಲಿ ಉಚಿತ ಆಸ್ಪತ್ರೆಗಳನ್ನು ಆರಂಬಿಸಿ, ವೈದ್ಯರ ನೇಮಕಾತಿ.

9. ಪ್ರತಿ ಗುರುವಾರ ಮತ್ತು ತನ್ನ ಜನ್ಮದಿನದಂದು ಅಕ್ಬರನ ಪ್ರೀಯವಾದ ರವಿವಾರದಂದು ಪ್ರಾಣಿವಧೆಯನ್ನು ನಿಷೇಧಿಸಿದನು.

10. ಬಡವರಿಗೆ, ಅಂಗವಿಕಲಕರಿಗೆ, ವಿಧುವೆಯರಿಗೆ ಆಶ್ರಯ ನೀಡಲು ಭೂಮಿಯನ್ನು ಮಿಸಲಾಗಿಟ್ಟನು.

11. ಅಕ್ಬರನ ಕಾದಲ್ಲಿದ್ದ ಅಧಿಕಾರಿಗಳನ್ನು ಮುಂದುವರಿದನು.

12. ಯುದ್ಧ ಖೈದಿಗಳನ್ನು ಮತ್ತು ಅಪರಾದ ಖೈದಿಗಳನ್ನು ಬಿಡುಗಡೆ ಮಾಡಿದನು.

**7. ಸೈನಿಕ ಸಾಧನೆಗಳು.**

1. ಖುಸ್ರುವಿನ ದಂಗೆಯ ದಮನ.1606
2. ಸಿಖ್‌ರ ಗುರು ಅರ್ಜುನದೇವನ ಹತ್ಯೆ 1606
3. ಕಂದಹಾರ ಮತ್ತು ಲಾಹೋರದ ರಕ್ಷಣೆ. 1606-7
4. ಬಂಗಾಳದ ಮೇಲೆ ದಂಡೆಯಾತ್ರೆ. 1612
5. ಮೇವಾರದ ಜೋತೆ ಹೋರಾಟಗಳು. 1609-15
6. ಕಾಂಗ್ರಾದ ವಿಜಯ. 1670
7. ದಕ್ಷಿಣದ ದಂಡೆಯಾತ್ರೆಗಳು. 1608-1617
8. ಕಂದಹಾರ ಕಳೆದುಕೊಂಡದ್ದು. 1622

**1. ಖುಸ್ರುವಿನ ದಂಗೆಯ ದಮನ.1606**

ಜಹಾಂಗೀರನ ಮಗ ಖುಸ್ರು ಅತ್ಯಂತ ದೈರ್ಯಶಾಲಿ, ಚತುರ ಆಡಳಿತಗಾರ, ಬುದ್ಧಿಶಾಲಿ, ದಯಾಳು, ಜನಪ್ರೀಯನಾಗಿದ್ದನು.ತಾತ ಅಕ್ಬರನ ಎಲ್ಲಾ ಗುಣಗಳನ್ನು ಹೊಂದಿದ್ದನು. ಅಕ್ಬರನ ಪ್ರೀತಿಯ ಮೊಮ್ಮಗನಾಗಿ ಆಡಳಿತ ಮತ್ತು ರಣಭೂಮಿಯಲ್ಲಿ ಸಹಾಯಕನಾಗಿದ್ದನು. ಆಸ್ಥಾನದ ಮಂತ್ರಿಗಳ, ವಿದ್ವಾಂಸರ ಮನ ಗೆದ್ದಿದ್ದನು. ತಂದೆ ಮಾಡುವ ಕರ್ತವ್ಯಗಳನ್ನು ಮಗ ಮಾಡುತ್ತಿದ್ದದ್ದು, ಹಾಗೂ ಜಹಾಂಗೀರ ಉದ್ದಾಟತನ ವರ್ತನೆಯಿಂದ ಖುಸ್ರು ಮುಂದಿನ ಚಕ್ರವರ್ತಿಯೆಂದ ಬಿಂಬಿತನಾಗಿದ್ದನು. ಸಹೋದರ ಮಾವ ಮಾನಸಿಂಗ್, ಭಗವಾನದಾಸ್, ಮಹಾಸಿಂಗ್, ಮಿರ್ಜಾಅಜೀಜ್ ಕೋಕ್, ಮತ್ತು ಮಹಬತ್ ಖಾನ (ಖುಸ್ರುವಿನ ನೆಚ್ಚಿನ ಗೆಳೆಯ) ಖುಸ್ರುನನ್ನು ದಹೆಲಿಯ ಚಕ್ರವರ್ತಿ ಮಾಡಲು ಪ್ರಯತ್ನಿಸಿದ್ದರು. ಮಗನ ಜನಪ್ರೀಯತೆ, ತನ್ನ ವಿರೋಧವೇ ಸ್ಪರ್ಧಿಸುತ್ತಿದ್ದದ್ದು ಜಹಾಂಗೀರನಿಗೆ ಅವನ ಮೇಲೆ ದ್ವೇಶ ಸಾಧಿಸುವಂತೆ ಮಾಡಿತ್ತು.

ಜಹಾಂಗೀರನು ಬಾದಷಹಾ ಆದಮೇಲೆ ಅವನ ಬೆಂಬಲಿಗರನ್ನು ಅವನಿಂದ ದೂರ ಮಾಡಲು ಅವರಿಗೆ ಉನ್ನತ ಹುದ್ದೆ ಮತ್ತು ಅಪಾರ ಸಂಪತ್ತನು ನೀಡಿ, ಅವನಿಂದ ದೂರ ಸರಿಸಿದನು. ಖುಸ್ರವನ್ನು ಸಾರ್ವಜನಿಕವಾಗಿ ಕ್ಷಮಿಸುವಂತೆ ನಾಟಕವಾಡಿ ಅವನನ್ನು ಗೃಹಬಂಧನದಲ್ಲಿಟ್ಟನು. ಆದರೆ ಖುಸ್ರವಿನ ಜನಪ್ರೀಯತೆ ಕಡಿಮೆಯಾಗಲಿಲ್ಲ. ಹುಸೇನ್ ಬೇಗ್ ಮತ್ತು ಅಬ್ದುಲ್ ಅಜೀಜ್ 12000 ಸೈನಿಕರೊಂದಿಗೆ ಅವನ ಬೆಂಬಲಕ್ಕೆ ಮುಂದೆ ಬಂದು ಖುಸ್ರುವನನ್ನು ಗೃಹಬಂಧನದಿಂದ ಬಿಡುಗಡೆ ಮಾಡಿ ಲಾಹೋರಗೆ ಪ್ರಯಾಣ ಬೆಳಿಸಿದರು. ದಾರಿ ಮದ್ಯದಲ್ಲಿ ಸಿಖ್‌ರ ಗುರು ಅರ್ಜುನದೇವನ ಆಶಿರ್ವಾದ ಮತ್ತು ಬೆಂಬಲ ಪಡೆದನು.

ಪಲಾಯನಗೈದ ವಿಷಯ ತಿಳಿದು ಜಹಾಂಗೀರನು ಕೇಲವೇ ಗಂಟೆಗಳಲ್ಲಿ 1 ಲಕ್ಷ ಸೈನ್ಯವನ್ನು ಮಗನನ್ನು ಬಂಧಿಸಲು ಬೆನ್ನಟ್ಟಿಸಿದನು. ಈ ಸೈನ್ಯ ನಾಯಕತ್ವವನ್ನು ಖುಸ್ರುವಿನ ಮಿತ್ರನಾದ ಮಹಬತ್ ಖಾನನಿಗೆ ಒಪ್ಪಸಿದನು. ಜಲಂದರ ಬಳಿ ಬಾರೋವಾಲ ಮೈದಾನದಲ್ಲಿ ವಿಶ್ರಾಂತಿ ಪಡೆಯುತಿದ್ದ ಮಿತ್ರನನ್ನು ಬೆಂಬಲ ನೀಡಲು ಬಂದೇನೆಂದು ಮೋಸತನದಿಂದ ಬಂದಿಸಿದನು. ಕೈ-ಕಾಲುಗಳಿಗೆ ಸರಪಳಿ ಹಾಕಿ ದರಬಾರಿಗೆ ತರಲಾಯಿತು. ಸರೆಮನೆಯಲ್ಲಿ ಖುಸ್ರವಿನ ಕಣ್ಣುಗಳನ್ನು ಕೀಳಿಸಿ ಚಿತ್ರಹಿಂಸೆ ನೀಡಿ ಕೊಲ್ಲಲಾಯಿತು.

**2. ಸಿಖ್‌ರ ಗುರು ಅರ್ಜುನದೇವನ ಹತ್ಯೆ 1606**

ಸಿಖ್‌ರ ಗುರು ಅರ್ಜುನದೇವನ ನೇತೃತ್ವದಲ್ಲಿ ಸಿಖ್ ಧರ್ಮ ಅತಿವೇಗದಲ್ಲಿ ಬೆಳೆಯುತಿತ್ತು, ಬಲವಂತಕ್ಕೆ ಮಣಿದು ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡ ಸಾವಿರಾರು ಹಿಂದುಗಳು ಸಿಖ್ ಧರ್ಮಕ್ಕೆ ಮತಂತಾರಗೊಳ್ಳತ್ತಿದ್ದರು. ಅಲ್ಲದೆ ಈ ಗುರು ರಾಜಕುಮಾರ ಖುಸ್ರುವಿಗೆ ಆರ್ಶಿವಾದ ಮತ್ತು ಬೆಂಬಲ ನೀಡಿದ್ದಕ್ಕಾಗಿ ಅವನ ಆಸ್ತಿಯನ್ನು ಮುಟ್ಟುಗೋಲು ಹಾಕಿ, ಇವನಿಗೆ ಗಲ್ಲು ಶಿಕ್ಷೆ ನೀಡಿದನು. ಇದರಿಂದ ಶಿಖ್ ರು ಮೊಘಲರ ಪರಮ ವೈರಿಗಳಾದರು.

**3. ಕಂದಹಾರ ಮತ್ತು ಲಾಹೋರದ ರಕ್ಷಣೆ. 1606-1607**

ಕ್ರಿ.ಶ 1606-07 ರಲ್ಲಿ ಸಾಮ್ರಾಟನು ಸಾಮ್ರಾಜ್ಯದ ಆಂತರಿಕ ದಂಗೆಗಳನ್ನು ಮಗ್ನನಾದ ಅವಕಾಶ ಉಪಯೋಗಿಸಿಕೊಂಡು, ಪರ್ಶಿಯಾದ ಚಕ್ರವರ್ತಿ ಶಹ ಅಬ್ಬಾಸಖಾನನು ವಿಶ್ವವಿಖ್ಯಾತ ವಾಣಿಜ್ಯ ನಗರ & ಯೂರೋಫಿನ ವ್ಯಾಪಾರದ ಮಾರ್ಗದ ಹೆಭ್ಭಾಗಿಲು, ಆಗಿದ್ದ ಕಂದಹಾರ ಮತ್ತು ಲಾಹೋರಗಳನ್ನು ಪಡೆಯಲು ರಾಜಕೀಯ ಒಳಸಂಚು ಮಾಡಿ ಪಡೆಯಲು ಪ್ರಯತ್ನಿಸಿದನು. ಆದರೆ ಜಹಾಂಗೀರನು ಮಿರ್ಜಾ ಘಾಜಿಯ ನೇತೃತ್ವದಲ್ಲಿ ಸುಸಜ್ಜಿತವಾದ ಸೈನ್ಯವನ್ನು ಲಾಹೋರಗೆ ಕಳುಹಿಸಿದನು. ಇವನ ಸೈನ್ಯ ಕಂಡ ಪರ್ಶಿಯಾದ ಚಕ್ರವರ್ತಿ ಸೈನೀಕರು ಪಲಾಯನ ಮಾಡಿದರು. ಹೀಗೆ ಕಂದಹಾರ ಮತ್ತು ಲಾಹೋರನ್ನು ರಕ್ಷಿಸಿದನು.

**4. ಬಂಗಾಳದ ಮೇಲೆ ದಂಡೆಯಾತ್ರೆ. 1612**

ಜಹಾಂಗೀರನು ಬಾದಷಹ ಆದನಂತರ ಬಂಗಾಳದಲ್ಲಿ ಮೊಘಲರ ವೈರಿಗಳಾದ ಅಫಘನ್ನರು ಉಸ್ಮಾನಖಾನನ ನೇತೃತ್ವದಲ್ಲಿ ದಂಗೆಯೆದ್ದರು. ಆಗ ಜಹಾಂಗೀರನು ಇಸ್ಲಾಮಖಾನನ ಮುಖಂಡತ್ವದಲ್ಲಿ ಬಂಗಾಳಕ್ಕೆ ಸೈನ್ಯ ರವಾನಿಸಿದನು. ಇವನು ದಂಗೆಯನ್ನಡಗಿಸಿ, ಶತೃಗಳನ್ನು ಕೊಂದು ಬಂಗಾಳದಲ್ಲಿ ಶಾಂತಿ ಸ್ಥಾಪಿಸಿದನು.

**5. ಮೇವಾರದ ಜೋತೆ ಹೋರಾಟಗಳು. 1609-15**

ಅಕ್ಬರನ ಕಾಲದಲ್ಲಿ ಮೇವಾಡದ ಅರಸ ರಾಣಾ ಪ್ರತಾಪಸಿಂಗ್‌ನು 1597 ರಲ್ಲಿ ಮರಣ ಹೊಂದಿದ ಮೇಲೆ ಅವನ ಮಗ ರಾಣಾ ಅಮರಸಿಂಗ್‌ನು ಮೇವಾಡದ ಅರಸನಾದನು. ಅವನು ಸಹ ತಂದೆಯಂತೆ ಸ್ವಾಭಿಮಾನಕ್ಕೆ ಮತ್ತು ಸ್ವಾತಂತ್ರ್ಯ ಪ್ರೀಯತೆಗೆ ಹೆಸರುವಾಸಿಯಾಗಿದ್ದನು. ಇದರಿಂದ ಮೇವಾಡನ್ನು ಸಂಪೂರ್ಣವಾಗಿ ಸದೆಬಡಿಯುವ ಉದ್ದೇಶದಿಂದ ಜಹಾಂಗೀರನು ಮೇವಾಡದ ಮೇಲೆ ಮೂರು ದಂಡೆಯಾತ್ರೆಗಳನ್ನು ಕೈಗೊಂಡನು.

1) ಮೇವಾರದ ಮೊದಲ ದಂಡೆತಾತ್ರೆ. :- 1606 ರಲ್ಲಿ ಜಹಾಂಗೀರನು ಮೇವಾಡನ್ನು ಮಣಿಸಲು ಮೊದಲ ದಂಡಯಾತ್ರೆ ಕೈಗೊಂಡನು. ತನ್ನ ಎರಡನೇಯ ಮಗ ರಾಜಕುಮಾರ ಫರ್ವೇಜಜನ ನೇತೃತ್ವದಲ್ಲಿ ಬಹುದೊಡ್ಡ ಸೈನ್ಯವನ್ನು ಕಳುಹಿಸಿಕೊಟ್ಟನು. ಅವನ ಬೆಂಬಲಕ್ಕೆ ಅಶಫ್‌ಖಾನ ಎಂಬ ಹಿರಿಯ ದಂಡನಾಯಕನನ್ನು ಕಳುಹಿಸಿ ಕೊಟ್ಟನು. ಮೇವಾಡದ ರಜಪೂತ ಸೈನ್ಯ ಮತ್ತು ಮೊಘಲ್‌ರ ಸೈನ್ಯದ ಮಧ್ಯ ದೇವಾರ ಎಂಬಲ್ಲಿ ಯುದ್ಧ ಸಂಭವಿಸಿತು. ಆದರೆ ಯಾವೂದೇ ಪಕ್ಷಕ್ಕೆ ಜಯ ಸಂಭವಿಸಲಿಲ್ಲ. ಆಗ್ರಾದಲ್ಲಿ ಖುಸ್ರುವಿನ ದಂಗೆ ಪ್ರಾರಂಭವಾಗಿದ್ದರಿಂದ ಯುದ್ಧವನ್ನು ನಿಲ್ಲಿಸಿ ಅಲ್ಲಿಯ ಸೈನ್ಯವನ್ನು ಜಹಾಂಗೀರನು ವಾಪಸ್ ಕರೆಯಿಸಿಕೊಂಡನು.

2) 1608 ರಲ್ಲಿ ಮೇವಾಡದ ಮೇಲೆ ಎರಡನೇಯ ದಂಡಯಾತ್ರೆ ಮಾಡಲು ಮಹಬ್ಬತ್‌ಖಾನ್ ನೇತೃತ್ವದಲ್ಲಿ ಬೃಹತ್ ಸೈನ್ಯ ಕಳುಹಿಸಿದನು. ಇವನು ಮೇವಾರನ್ನು ಗೆದ್ದರೂ ರಾಣಾ ಅಮರಸಿಂಗ್‌ನನ್ನು ಸಂಪೂರ್ಣವಾಗಿ ಸೋಲಿಸಲಾಗಲಿಲ್ಲ.

3) 1615 ರಲ್ಲಿ ಜಹಾಂಗೀರನು ಮತ್ತೊಬ್ಬ ಮಗ ರಾಜಕುಮಾರ ಖುರ್ರಮ್‌ನ ಜೋತೆ ಬೃಹತ್ತ ಸೈನ್ಯವನ್ನು ಮೇವಾಡ ಮತ್ತು ಅಮರಸಿಂಗ್‌ನನ್ನು ಸೋಲಿಸಲು ಕಳುಹಿಸಿಕೊಟ್ಟನು. ರಣಚತುರನಾದ ಖುರ್ರಮ್‌ನು ಮೇವಾಡನ್ನು ನಾಲ್ಕು ದಿಕ್ಕುಗಳಿಂದ ಮುತ್ತಿಗೆ ಹಾಕಿದನು. ಯುದ್ಧ ಘೋಷಣೆಯ ಮುಂಚೆ ಒಬ್ಬ ರಾಯಭಾರಿ ಜೊತೆ ಶರಣಾಗುವಂತೆ ಶರಣಾಗುವಂತೆ ಸಂದೇಶ ಕಳುಹಿಸಿದನು. ಈಗಾಗೇ ಸಾಕಷ್ಟು ಯುದ್ಧ ಮಾಡಿ ದಣಿದಿದ್ದ ಅಮರಸಿಂಗ್ ನು ಶುಭಕರಣ ಮತ್ತು ಹರಿದಾಸರನ್ನು ಅಜಮೀರದಲ್ಲಿದ್ದ ಖುರ್ರಮ್‌ನ ಹತ್ತಿರ ಮಾತುಕತೆಗೆ ಕಳುಹಿಸಿದನು. ಯುದ್ದ ನೀತಿಯನ್ನು ಕೈಬಿಟ್ಟು ಶಾಂತಿ ಸಂಧಾನದ ಒಪ್ಪಂದ ಇವರಿಬ್ಬರಲ್ಲಿ ಉಂಟಾಯಿತು. ಖುರ್ರಮ್‌ನು ರಾನಾನಿಗೆ ಅಮೂಲ್ಯ ಮುತ್ತುಗಳನ್ನು ನೀಡಿ ಭವ್ಯ ಸ್ವಾಗತ ನೀಡಿದನು. ರಾಣಾನು ಕೂಡ ಬೆಲೆಬಾಳುವ ಆಭರಣಗಳನ್ನು 9 ಅಶ್ವಗಳನ್ನು ಮತ್ತು 7 ಆನೆಗಳನ್ನು ನೀಡಿ ಗೌರವಿಸಿದನು.

- ರಾಣಾನು ಮೋಘಲ್‌ರ ಸಾರ್ವಭೌಮತ್ವವನ್ನು ಗೌರವಿಸಬೇqಕು
- ರಾಣಾನು ವ್ಯಯಕ್ತಿವಾಗಿ ಇಲ್ಲವೆ ಅವನ ಮಗನನ್ನು ಮೋಘಲ್ ದರ್ಬಾರಕ್ಕೆ ಕಳುಹಿಸಿಕೊಡಬೇಕು.
- ರಾಣಾನ ಮೇವಾರದ ಆಂತರಿಕ ವಿಷಯದಲ್ಲಿ ಅವನಿಗೆ ಸಂಪೂರ್ಣಸ್ವಾತಂತ್ರ್ಯ ನೀಡಬೇಕು.
- ಮೇವಾಡದ ಕೋಟೆಯ ದುರಸ್ತಿ ಮತ್ತು ಕಕ್ಷಣೆ ಕಾರ್ಯಕ್ಕೆ ಅಡ್ಡಿ ಪಡಿಸಬಾರದು.
- ರಾಣಾನು ಮೊಘಲ್‌ರಿಗೆ ಪ್ರತಿವರ್ಷ 1000 ಅಶ್ವಗಳನ್ನು ನೀಡಬೇಕು.
- ರಾಣಾನ ಮಗನಾದ ಕರಣನಿಗೆ 5000 ಜಾಟ್ ಪದವಿಯನ್ನು ನೀಡಿ ಗೌರವಿಸಲಾಯಿತು.

ಹೀಗೆ ಶತಮಾನ ಕಾಲದಿಂದ ನಡೆಯುತ್ತಿದ್ದ ಮೇವಾರ ಮತ್ತು ಮೊಘಲ್‌ರ ನಡುವಿನ ಹೋರಾಟಗಳು ನಿಂತು, ಶಾಂತಿ ಸ್ಥಾಪಿತವಾಯಿತು. ಬಾಬರ ಕಾಲದಿಂದಲೂ ನಡೆಯುತ್ತಿದ್ದ ಸಂಘರ್ಷ ಕೊನೆಗೊಂಡಿತು. ಯುದ್ದ ಮಾಡದೇ ರಕ್ತಪಾತವಿಲ್ಲದೇ ಅಕ್ಬರನು ಸಹ ಮಾಡದ ಕೆಲಸವನ್ನು ಖುರ್ರಮ್‌ನು ಅತ್ಯಂತ ಚಾಣಕ್ಷತೆಯಿಂದ ಮಾಡಿದ್ದು ರಾಜ ಮನೆತನದಲ್ಲಿ ಇವನ ಕೀರ್ತಿ ಹೆಚ್ಚಾಯಿತು.

**6. ಕಾಂಗ್ರಾದ ವಿಜಯ. 1607.**

ಪಂಜಾಬಿನ ಅಯಾಕಟ್ಟಾದ ಸ್ಥಳವಾಗಿದ್ದ ಕಾಂಗ್ರಾ ಸುಸಜ್ಜಿತವಾದ ಭದ್ರ ಕೋಟೆ ಹೊಂದಿತ್ತು. ಅಕ್ಬನು ಈ ಕೋಟೆಯನ್ನು ವಶಪಡಿಸಿಕೊಳ್ಳಲು ಮಾಡಿದ ಪ್ರಯತ್ನಗಳೆಲ್ಲವೂ ವಿಫಲವಾಗಿದ್ದವು. ಕ್ರಿ.ಶ 1620 ರಲ್ಲಿ ಖುರ್ರಮ್‌ನ ನಾಯಕತ್ವದಲ್ಲಿ ಬೃಹತ್ ಸೈನ್ಯವನ್ನು ಕಳುಹಿಸಿಕೊಟ್ಟನು. ಇವನು ಅತಿ ಸುಲಭವಾಗಿ ಅತ್ಯಂತ ಚಾಣಕ್ಷನಾಗಿ ವಶಪಡಿಸಿಕೊಂಡನು.

**7. ದಕ್ಷಿಣದ ದಂಡೆಯಾತ್ರೆಗಳು. 1608-1617**

ತಂದೆ ಅಕ್ಬರನು ಪ್ರಾರಂಭಿಸಿದ ದಕ್ಷಿಣ ಭಾರತದ ವಿಸ್ತರಣಾ ನೀತಿಯನ್ನು ಜಹಾಂಗೀರನು ಮುಂದುವರಿಸಿದನು. ಇಡೀ ದಕ್ಷಿಣ ಭಾರತದ ಮೇಲೆ ಮೊಘಲ್ ಸಾಮ್ರಾಜ್ಯದ ನಿಯಂತ್ರಣ ಸಾಧಿಸಲು ದಂಡಯಾತ್ರೆಗಳನ್ನು ಮುಂದುವರಿಸಿದನು. ಅಕ್ಬರನು ದಕ್ಷಿಣದ ಅಹಮದ್‌ನಗರವನ್ನು ಗೆದ್ದಿದರೂ ಅದರ ಮೇಲೆ ಸಂಪೂರ್ಣ ನಿಯಂತ್ರಣ ಸಾಧಿಸಿರಲಿಲ್ಲ. ಅದ್ದರಿಂದ ದಕ್ಷಿಣ ಭಾರತದಲ್ಲಿ ನಿಯಂತ್ರಣ ಸಾಧಿಸಬೇಕಾದರೆ ಅಹಮದ್‌ನಗರದ ಮೇಲೆ ಮೊಘಲ್ ಸಾರ್ವಭೌಮತ್ವ ಸ್ಥಾಪಿಸುವದಕ್ಕಾಗಿ ದಂಡಯಾತ್ರೆಗಳನ್ನು ಕೈಗೊಂಡನು.

- ಅಹಮದ್‌ನಗರದ ಮೇಲೆ ಮೊದಲ ದಂಡಯಾತ್ರೆ. 1608 ಈ ರಾಜ್ಯವನ್ನು ಸುಲ್ತಾನ ಅಹಮದ್‌ಷಹಾ ಆಳುತಿದ್ದನು. ಅವನ ಮಂತ್ರಿ ಮಲಿಕ್ ಅಂಬರನು ಅತ್ಯಂತ ರಾಜಕೀಯ ಚತುರನು, ದಕ್ಷ ಆಡಳಿತಗಾರನು, ಮಹಾಸೇನಾಪತಿಯಾಗಿದ್ದು ರಣಚತುರನಾಗಿದ್ದನು. ಜಹಾಂಗೀರನು ಕ್ರಿ.ಶ. 1608 ರಲ್ಲಿ ಅಬ್ದುಲ್ ರಹೀಮ್‌ನ ನೇತೃತ್ವದಲ್ಲಿ 12000 ಅಶ್ವ ಪಡೆಯನ್ನು ಕಳುಹಿಸಿ ಕೊಟ್ಟನು. ಈ ಸೈನ್ಯನ್ನು ಮಲಿಕ್ ಅಂಬರನು ಮರಾಠ ಸೈನ್ಯ ಪಡೆಯ ಗೊರಿಲ್ಲಾ ಯುದ್ಧ ತಂತ್ರದಿಂದ ಸೋಲಿಸಿದನು.
- ಅಹಮದ್‌ನಗರದ ಮೇಲೆ ಎರಡನೇಯ ದಂಡಯಾತ್ರೆ. 1610 ಜಹಾಂಗೀರನು ಈ ಸೋಲಿನಿಂದ ಇನ್ನಷ್ಟು ಸುಮಾರು 50.000 ಸೈನ್ಯವನ್ನು ರಾಜಕುಮಾರ ಫರ್ವೇಜಜ್‌ನನ್ನು ದಕ್ಷಿಣ ಭಾರತದ ರಾಜ್ಯಪಾಲನಾಗಿ ಖಾನದೇಶಕ್ಕೆ ಕಳುಹಿಕೊಟ್ಟನು. ಮತ್ತು ಅವರ

ಜೊತೆಅಬ್ದುಲ್ ಖಾನ್ ಮತ್ತು ಖಾನ್ ಜಹಾನ್ ಲೋದಿ ಗಳೆಂಬ ದಂಡನಾಯಕರನ್ನು ಕಳುಹಿಸಿಕೊಟ್ಟನು. ಆದರೆ ಈ ದಂಡನಾಯಕರ ಮಧ್ಯ ಉಂಟಾದ ಬಿನ್ನಾಭಿಪ್ರಾಯಗಳಿಂದ ಇ ಎರಡನೇಯ ದಾಳಿಯು ಸಂಪೂರ್ಣವಾಗಿ ಯಸಶ್ವಿಯಾಗಲಿಲ್ಲ.

• ಅಹಮದ್‌ನಗರದ ಮೇಲೆ ಮೂರನೇಯ ದಂಡಯಾತ್ರೆ. 1616

ಜಹಾಂಗೀರನು ಎರಡು ದಂಡಯಾತ್ರೆಗಳು ವಿಫಲವಾಗಿದ್ದರಿಂದ ಮೂರನೇ ದಂಡಯಾತ್ರೆಯನ್ನು ಈಗಾಗಲೇ ಮೇವಾಡವನ್ನು ಮೊಘಲ್ ಸಾರ್ವಭೌಮಕ್ಕೆ ತಂದು "ಷಹಾ ಖರ್ರಮ್" ಎಂಬ ಬಿರುದನ್ನು ಪಡೆದಂತಹ ಖರ್ರಮ್‌ನಿಗೆ ನಿಯೋಜಿಸಿದನು. ಅತ್ಯಂತ ಮುತ್ಸದ್ಧಿ ಮತ್ತು ರಣಚತುರನಾದ ಖರ್ರಮ್ ದಕ್ಷಿಣದ ಬಹರಮ್‌ಪುರಕ್ಕೆ ಅಪಾರ ಸೈನ್ಯದೊಡನೆ ಬಂದಳಿದನು. ಈಗಾಗಲೇ ಅಲ್ಲಿಯೇ ನೆಲೆಯೂರಿದ್ದ ಮೊಘಲ್ ಸೈನ್ಯವನ್ನು ಸಂಘಟಿಸಿದನು. ದೆಹಲಿಯಿಂದ ಇನ್ನೂ ಒಂದು ಲಕ್ಷ ಸೈನ್ಯ ಬರುತ್ತಿರುವದಾಗಿ ಸುದ್ಧಿ ಹರಡಿಸಿದನು. ಅಹಮದ್‌ನಗರದ ಸುತ್ತ ಮೊಘಲ್ ಸೈನ್ಯದೊಡನೆ ಮುತ್ತಿಗೆ ಹಾಕಿದನು. ಯುದ್ಧ ಪ್ರಾರಂಭಿಸದೆನಿನ್ನೂ ಒಂದು ಲಕ್ಷ ದೆಹಲಿಯ ಸೈನ್ಯ ಬರುತ್ತಿದೆ ಎಂದು ಶತೃವಿನ ಶಿಬಿರದಲ್ಲಿ ಪ್ರಚಾರ ಪಡಿಸಿದನು. ಇದರಿಂದ ಮಲಕ್ ಅಂಬರ ಈ ಬೃಹತ್ ಸೈನ್ಯವನ್ನು ಎದುರಿಸಲು ಸಾಧ್ಯವಿಲ್ಲವೆಂದು ತಿಳಿದು ಒಪ್ಪಂದಕ್ಕೆ ಮುಂದಾದನು. ತಾನು ಮೊಘಲ್ ಸಾಮ್ರಾಜ್ಯದ ಸಾಮಾಂತವನ್ನು ಒಪ್ಪಿಕೊಳ್ಳುವದಾಗಿ ಮತ್ತು ಮುಂದಿನ ದಕ್ಷಿಣ ಭಾರತದ ದಂಡಯಾತ್ರೆಗೆ ಸಹಕರಿಸುವದಾಗಿ ಅಪಾರ ಸಂಪತ್ತುನ್ನು ಕಾಣಿಕೆಯಾಗಿ ನೀಡಿ ಒಪ್ಪಂದ ಮಾಡಿಕೊಂಡನು. ಈ ವಿಜಯದಿಂದ ಜಹಾಂಗೀರನು ಖರ್ರಮ್‌ನಿಗೆ "ಷಹಜಹಾನ್" ಎಂಬ ಬಿರುದನ್ನು ನೀಡಿ ಗೌರವಿಸಿದನು.

**8. ಪೊರ್ಚುಗೀಸ್‌ರೊಡನೆ ಅನುಸರಿಸಿದ ನೀತಿ.**

ಯೂರೋಫಿಯನ್‌ರಲ್ಲಿ ಪೊರ್ಚುಗೀಸ್‌ರೇ ಭಾರತಕ್ಕೆ ಮೊದಲು ವ್ಯಾಪಾರಕ್ಕಾಗಿ ಭಾರತಕ್ಕೆ ಜಲಮಾರ್ಗದಿಂದ ಬಂದಿದ್ದರು. ಪ್ರಾರಂಭದಲ್ಲಿ ದಕ್ಷಿಣದ ಕರಾವಳಿ ಬಂದರು ಪ್ರದೇಶಗಳಲ್ಲಿ ತಮ್ಮ ವಸಾಹತುಗಳನ್ನು ಸ್ಥಾಪಿಸಿದ್ದರು. ವಿಜಯನಗರ ಸಾಮ್ರಾಟರ ಸಹಕಾರದಿಂದ ತಮ್ಮ ವ್ಯಾಪಾರವನ್ನು ಸಾಕಷ್ಟು ವಿಸ್ತರಿಸಿದ್ದರು. ಅಕ್ಬರನ ಕಾಲದಲ್ಲಿ ಸೂರತ್ ಅಹಮದ್‌ನಗರ ಆಗ್ರಾ ದೆಹಲಿ ಮತ್ತು ಬಂಗಾಳದಳದಲ್ಲಿಯೂ ತಮ್ಮ ವ್ಯಾಪಾರದ ನೆಲೆಗಳನ್ನು ಪ್ರಾರಂಬಿಸಿದ್ದರು. ಮುಂದೆ ಜಹಂಗಾಗಿರನ ಕಾಲದಲ್ಲಿಯೂ ಬಾದಷಹಾನ ಸಹಕಾರವನ್ನು ಪಡೆಯುತ್ತಿದ್ದರು. ಮತ್ತು ಇತರ ಯೂರೋಫಿಯನ್‌ರಿಗೆ ಅವಕಾಶ ನೀಡದಂತೆ ನೋಡಿಕೊಂಡಿದ್ದರು. ಅತೀ ಕಡಿಮೇ ಜನಸಂಖ್ಯೆ ಹೊಂದ್ದಿದ್ದ ಇವರು ತಮ್ಮ ಸಂಖ್ಯಯನ್ನು ಹೆಚ್ಚಿಸಿಕೊಳ್ಳಲು ಸ್ಥಳಿಯ ಹಿಂದೂ ಮತ್ತು ಮುಸ್ಲೀಮ್ ಸ್ತ್ರೀಯರನ್ನು ಹೆಚ್ಚು ಹೆಚ್ಚು ಮದುವೆಯಾಗಲು ತಮ್ಮ ಅಧಿಕಾರಗಳಿಗೆ ಸೂಚಿಸಿದ್ದರು. ಇದರಿಂದ ಪೊರ್ಚುಗೀಸ್ ಅಧಿಕಾರಿಗಳು ಮುಸ್ಲೀಮ್ ಸ್ತ್ರೀಯನ್ನು ಬಲವಂತವಾಗಿ ಮದವೆ ಮಾಡಿಕೊಳ್ಳಲು ಪ್ರಯತ್ನ ಮಾಡಿದ್ದರು. ಅರಮನೆಯ ದಾಸಿಯರನ್ನು ಬಲತ್ಕರಿಸಿದ್ದರಿಂದ ಜಹಾಂಗೀರನು ಇವರ ಮೇಲೆ ದಾಳಿ ಮಾಡಿ ದಂಡಿಸಿದನು. ಮತ್ತು ಇವರನ್ನು ನಿಯಂತ್ರಿಸಲು ಇತರ ಯೋರೋಫಿಯನ್ನರಾದ ಡಚ್‌ರಿಗೆ, ಫ್ರೆಂಚ್‌ರಿಗೆ ಮತ್ತು ಬ್ರಿಟಿಷರಿಗೂ ವ್ಯಾಪಾರ ಮಾಡಲು ಅವಕಾಶ ನೀಡಲಾರಂಭಿಸಿದನು.

**9. ಬ್ರಿಟಿಷರೊಂದಿಗೆ ಅನುಸರಿಸಿದ ನೀತಿ.**

ಬ್ರಿಟಿಷರು ಕ್ರಿ.ಶ. 1600 ರಲ್ಲಿ "ಈಸ್ಟ ಇಂಡಿಯಾ ಕಂಪನಿ" ಎಂಬ ಖಾಸಗಿ ಸಂಸ್ಥೆಯನ್ನು ಸ್ಥಾಪಿಸಿಕೊಂಡು ಭಾರತದಲ್ಲಿ ವ್ಯಾಪಾರ ಮಾಡಲು ಪ್ರಯತ್ನಿಸಿದ್ದರು. ಆದರೆ ಪೊರ್ಚುಗೀಸ್‌ರ ಪ್ರಭಾವದಿಂದಾಗಿ ಬ್ರಿಟಿಷರಿಗೆ ವಸಾಹತುಗಳ ನೆಲೆಯನ್ನು ಸ್ಥಾಪಿಸಲು ಮೊಘಲ್ ಬಾದಷಹ ಅನುಮತಿ ನೀಡರಲಿಲ್ಲ. ಕ್ರಿ. ಶ. 1608 ರಲ್ಲಿ ಕ್ಯಾಪ್ಟನ್ ಹಾಕಿನ್‌ಸನ್ ಭಾರತಕ್ಕೆ ಬಂದು ಜಹಾಂಗೀರನ ದರ್ಬಾರನ್ನು ಸಂದರ್ಶಿಸಿದನು. ಇಂಗ್ಲೇಂಡಿನ ಚಕ್ರವರ್ತಿಯ ಮೊದಲನೆಯ ವಿಲಿಯಮ್ ಜೇಮ್ಸನ ಪತ್ರ ಮತ್ತು ಬೆಲೆಬಾಳುವ ಕಾಣಿಕೆಗಳನ್ನು ನೀಡಿದನು. ಇದರಿಂದ ಜಹಾಂಗೀರ ಬ್ರಿಟಿಷರಿಗೆ ಭಾರತದಲ್ಲಿ ವ್ಯಾಪಾರ ಮಾಡಲು ಅನುಮತಿ ನೀಡಿದನು. ಆದರೆ ಅಸಮದಾನಗೊಂಡ ಪೊರ್ಚಗೀಸ್‌ರು ಬ್ರಿಟಿಷರ ವ್ಯಾಪಾರಕ್ಕೆ ಸಾಕಷ್ಟು ತೊಂದರೆ ಕೊಟ್ಟರು. ಅಷ್ಟಲ್ಲದೇ ಮೊಘಲ್ ವ್ಯಾಪಾರ ಹಡುಗುಗಳನ್ನು ದರೋಡೆ ಮಾಡಿದರು. ಇದರಿಂದ ಮೊಘಲ್‌ರ ಮತ್ತು ಪೊರ್ಚಗೀಸ್ ಸಂಬಂಧಗಳು ಇನ್ನಷ್ಟು ಹದೆಗೆಟ್ಟವು.

ಕಿ.್ರ .ಶ. 1613 ರಲ್ಲಿ ಸರ್ ಥಾಮಸ್ ರೋ ಜಹಾಂಗೀರ್‌ನ ಆಸ್ಥಾನಕ್ಕೆ ಕರೆತಂದನು. ಆಗ ಜಹಾಂಗೀರನು ಅನೇಕ ರೋಗಗಳಿಂದ ಬಳುಲುತ್ತಿದ್ದನು. ಸರ್ ಥಾಮಸ್ ರೋ ತನ್ನ ಜೊತೆ ಕರೆದು ಕೊಂಡ ಬಂದಿದ್ದ ವೈದ್ಯರಿಂದ ಜಹಾಂಗೀರನನ್ನು ಗುಣ ಪಡಿಸಿದನು. ಇದರಿಂದ ಸಂತೃಪ್ಷನಾದ ಬಾದಷಹಾ ಬ್ರಿಟಿಷರಿಗೆ ವ್ಯಾಪಾರ ಮಾಡಲು ಆಗ್ರಾ ಮತ್ತು ದೆಹಲಿಯಲ್ಲಿ ವಶಾಹತು ವ್ಯಾಪಾರಕೋಟೆಗಳನ್ನು ಕಟ್ಟಿಕೊಳ್ಳಲು ಅನುಮತಿ ನೀಡಿ ಅವರ ಅಭೀವೃದ್ಧಿಗೆ ಕಾರಣನಾದನು.

**10. ಷಹಜಹಾನನ ದಂಗೆ ಮತ್ತು ದಮನ.**

1..) ಜಹಾಂಗೀರನ ಆರೋಗ್ಯ ಕ್ಷೀಣಿಸಿದ್ದು, ಮತ್ತು ಅವನ ಸಂದರ್ಶನ ವಿರಳಗೊಳಿಸಿದ್ದು ಖುರ್ರಮ್‌ನಿಗೆ( ಷಹಜಾಹನ್) ಸಂಶಯ ಉಂಟಾಯಿತು.

2.) ತನ್ನ ಮಾವನಾದ ಅಸಫಖಾನನ ಪ್ರತಿಸ್ಪರ್ಧಿಯಾದ ಮಹಬತ್‌ಖಾನನಿಗೆ ಹೆಚ್ಚಿನ ಬೆಂಬಲ ನೀಡಿದ್ದು ಅಸಮದಾನಕ್ಕೆ ಕಾರಣವಾಯಿತು.

3.) ಖುರ್ರಮನ ವಿಶೇಷ ಅಧಿಕಾರ ಮತ್ತು ಜಹಗೀರುಗಳನ್ನು ರದ್ದು ಗೊಳಿಸಿದ್ದು.

4.) ಖುರ್ರಮ್‌ನ ಬೆಂಬಲಿಗರನ್ನು ದೂರದ ಪ್ರದೇಶಗಳಿಗೆ ವರ್ಗಾವಣೆ ಮಾಡಿಸಿ, ಅವನ ಸಂದರ್ಶನ ವಿರಳ ಗೋಳಿಸಿದನು.

5.) ಫರ್ವೇಜಜನಿಗೆ ವಿಶೇಷ ಜಹಗೀರುಗಳನ್ನು ನೀಡಿ, ತನ್ನ ಬೆಂಬಲಕ್ಕೆ ಸಳೆದುಕೊಂಡಳು.

6.) ದೂರದ ಕಂದಹಾರದ ದಂಗೆಯನ್ನಡಗಿಸಲು ನೇಮಿಸಿ ಜಹಾಂಗೀರನಿಂದ ರಾಜಾಜ್ಞೆಯನ್ನು ನೀಡಿಸಿದಳು.

ಇದರಿಂದ ಅಸಮದಾನಗೊಂಡ ಷಹಾಜಹಾನ ತಂದೆಯ ಮತ್ತು ನೂರಜಹಾನಳ ವಿರುದ್ಧ ದಂಗೆಯೆದ್ದು, ಫತೇಪುರ ಸಿಕ್ರಿಯ ಮೇಲೆ ದಾಳಿ ಮಾಡಿದನು. ಆದರೆ ನೂರಜಹಾನಳು ಫರ್ವೇಜಜ ಮತ್ತು ಮಹಬತ್‌ಖಾನನ ನಾಯಕತ್ವದಲ್ಲಿ ಷಹಜಹಾನನ್ನು ಎದುರಿಸಲು ಬೃಹತ್ ಸೈನ್ಯ ಕಳುಹಿಸಿದಳು. ನಾಲ್ಕು ವರ್ಷಗಳ ಕಾಲ ಹೋರಾಡಿ ತನ್ನ ಹಣ, ಸಂಪತ್ತು, ಶಕ್ತಿಯನ್ನ ಕಳೆದುಕೊಂಡು, ಆರೋಗ್ಯ ಹಾಳು ಮಾಡಿಕೊಂಡ ಷಹಜಹಾನ ತನ್ನ ಮಾವನ ಸಲಹೆಯಂತೆ ಬೇಸರತ್ತಾಗಿ ಶರಣಾಗತನಾದನು. ಬೆಂಬಲವಾಗಿ ತನ್ನ ಮಕ್ಕಳಾದ ಧಾರ ಮತ್ತು ಔರಂಗಜೇಬರನ್ನು ವತ್ತೆಯಾಗಿ ರಾಜಧಾನಿಗೆ ಕಳುಹಿಸಿದನು.

**11. ಕಂದಹಾರ ಕಳೆದುಕೊಂಡದ್ದು. 1622**

ಕಂದಹಾರ ಅಕ್ಬರನ ಕಾಲದಿಂದ ಭಾರತದ ಅವಿಭಾಜ್ಯ ಅಂಗವಾಗಿತ್ತು. ವಿದೇಶಿ ವ್ಯಾಪಾರದ ಹೆಬ್ಬಾಗಿಲಾಗಿತ್ತು. ಇದನ್ನು ವಶ ಪಡಿಸಿಕೊಳ್ಳಲು ಪರ್ಶಿಯಾದ ಚಕ್ರವರ್ತಿಯಾದ ಷಹಾನು ಬೃಹತ್ ಸೈನ್ಯವನ್ನು ಮತ್ತೊಮ್ಮೆ ಕ್ರಿ. ಶ. 1622 ರಲ್ಲಿ ಆಕ್ರನಮಣ ಮಾಡಲು ಕಳುಹಿಸಿದನು. ಜಹಾಂಗೀರ ಖುರ್ರಮ್‌ನಿಗೆ (ಷಹಜಾಹನ್) ದಾಳಿಯನ್ನು ಎದುರಿಸಲು ಹೋಗುವಂತೆ ಆದೇಶಿಸಿದನು. ಆದರೆ ಖುರ್ರಮ್ (ಷಹಜಾಹನ್) ನೊರಜಹಾನ ರಾಜಕೀಯ ಒಳಸಂಚಿನಿಂದ ಅಸಮದಾನಗೊಂಡಿದ್ದನು. ಇದರಿಂದ ತಂದೆ ಬಾದಷಹಾನ ಆಜ್ಞೆಯನ್ನು ಧಿಕ್ಕರಿಸಿದನು. ಇದರ ಫಲವಾಗಿ ಜಹಾಂಗೀರನು ಕಂದಹಾರನ್ನು ಕಳೆದುಕೊಂಡನು.

**12. ಮಹಬತ್‌ಖಾನನ ದಂಗೆ ಮತ್ತು ದಮನ.**

ಮಹತ್ವಾಕಾಂಕ್ಷಿಯಾದ ಮಹಬತ್‌ಖಾನ ತನ್ನ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು, ತನ್ನ ಮಗಳನ್ನು ಫರ್ವೇಜಜನಿಗೆ ನೀಡಿ ಮದುವೆ ಮಾಡಿಸಿದನು. ಮುಂದೆ ಫರ್ವೇಜಜನನ್ನೆ ಬಾದಷಹ ಮಾಡವ ಆಸಕ್ತಿಯನ್ನ ವಹಿಸಿ ಯೋಜನೆ ರೂಪಿಸಲಾರಂಬಿದನು. ಇದರಿಂದ ತನ್ನ ಅಳಿಯ ಶಾರೀರನಿಗೆ ಉತ್ತರಾಧಿಕಾರತ್ವ ನೀಡುವ ಬಯಕೆಯಲ್ಲಿದ್ದ ನೂರಜಹಾನಳಿಗೆ ಮಹಬತ್ ಖಾನ ಮುಳುವಾದನು. ಇದರಿಂದ

1.) ಮಹಬತ್‌ಖಾನನಿಗೆ ದೂರದ ಬಂಗಾಳಕ್ಕೆ ರಾಜ್ಯಪಾಲನನ್ನಾಗಿ ಬಡ್ತಿ ನೀಡಿ ವರ್ಗಾವಣೆ ಮಾಡಿಸಿದಳು.

2.) ಫರ್ವೇಜಜನಿಗೆ ಕಾಬೂಲದ ರಾಜ್ಯಪಾಲನನ್ನಾಗಿ ನೇಮಿಸಿ ದೂರ ಇಟ್ಟಳು.

3.) ತನ್ನ ಬೆಂಬಲಕ್ಕೆ ತನ್ನ ಸಹೋರದನಾದ ಅಸಫಖಾನನ್ನು ದಿವಾನನನ್ನಾಗಿ ನೇಮಿಸಿದಳು.

4.) ಮುಂದೆ ಮಹಬತ್ ಖಾನನ ಮೇಲೆ ರಾಜದ್ರೋಹದ ಅಪಾದನೆ ಹೊರಿಸಿ, ಅವನನ್ನು ಬಂಧಿಸಲು ಆಜ್ಞೆಯನ್ನು ಹೊರಡಿಸಿದಳು, ಸಹೋದರ ಅಸಫಖಾನನ ಬೆಂಬಲ ಪಡೇದು ದಂಗೆಯೆದ್ದ ಮಹಬತಖಾನನನ್ನು ಬಂಧಿಸಿ ಸೆರೆಮನೆಗೆ ತಳ್ಳಿದಳು.

**13. ಕೊನೆಯ ದಿನಗಳು ಮತ್ತು ಮರಣ.**

ಜಹಾಂಗೀರ್‌ನು ಅತಿಯಾದ ಮದ್ಯಪಾನ ಮತ್ತು ಅಫೀಮು ಸೇವನೆಯಿಂದ ಅವನ ಆರೋಗ್ಯ ಕೆಡಲಾರಂಭಿಸಿತು. ಅನೇಕ ವೈದ್ಯಕೀಯ ಚಿಕಿತ್ಸೆ ನಿಡಿದ್ದರು ನಿವಾರಣೆಯಾಗಲಿಲ್ಲ. ವೈದ್ಯರ ಸಲಹೆಯಂತೆ ವಾತಾವಾರಣದ ಬದಲಾವಣೆಯಿಂದ ಅರೋಗ್ಯ ಸುಧಾರಿಸಬಹುದೆಂದು ಕಾಶ್ಮೀರಕ್ಕೆ ವಿಶ್ರಾಂತಿಗಾಗಿ ಕಳುಹಿಸಿಕೊಡಲಾಗಿತ್ತು. ಕಾಶ್ಮೀರದಿಂದ ವಾಪಸ ಬರುವಾಗ 1627 ನವ್ಹಂಬರ 23 ರಂದು ಭೀಮಬರ ಎಂಬಲ್ಲಿ ಜಹಾಂಗೀರ ಮರಣ ಹೊಂದಿದನು.

## ಜಹಾಂಗೀರನ ಜೀವನದಲ್ಲಿ ನೂರಜಹಾನಳ ಪಾತ್ರ

1. ಪೀಠಿಕೆ.
2. ಪ್ರಾರಂಬಿಕ ಜೀವನ.
3. ಗುಣ ವಿಶೇಷಗಳು.
4. ಸಲೀಮ್ ನೊಡನೆ ಪ್ರೇಮಾಂಕುರ ಮತ್ತು ಅಗುಲುವಿಕೆ.
5. ಮತ್ತೆ ಪ್ರಮೀಗಳ ಮಿಲನ
6. ಉತ್ಕರ್ಷ ದಿನಗಳು.
7. ಮಹತ್ವಾಕಾಂಕ್ಷೆದಿನಗಳು.
8. ಷಹಜಹಾನನ ದಂಗೆ ಮತ್ತು ದಮನ.
9. ಮಹಬತ್ ಖಾನನ ದಂಗೆ ಮತ್ತು ದಮನ.
10. ಕೊನೆಯ ದಿನಗಳು ಮತ್ತು ಮರಣ.
11. ಉಪಸಂವಾರ

**1. ಪೀಠಿಕೆ.**

ನೂರಜಹಾನ ಅಪ್ರತೀಮ ಸೌಂದ್ಯರ್ಯವತಿ, ಶ್ರೇಷ್ಠ ರಾಜಕೀಯ ಚತುರೆ, ಮಹತ್ವಾಕಾಂಕ್ಷಿ, ಮುತ್ಸದ್ಧಿ, ಜಹಾಂಗೀರನ ಜೀವನದಲ್ಲಿ ಪ್ರಮುಖ ವ್ಯಕ್ತಿಯಾಗಿದ್ದಾಳೆ. ಕ್ರಿ.ಶ. 1611 ರಲ್ಲಿ ಜಹಾಂಗೀರನನ್ನು ಮದುವೆಯಾದ ನಂತರ ಕ್ರಮೇಣ ಆಡಳಿತದಲ್ಲಿ ಹಸ್ತಕ್ಷೇಪ ಮಾಡುತ್ತ ರಾಜಕೀಯ ಚದುರಂಗದಲ್ಲಿ ಪ್ರಮುಖ ಪಾತ್ರವಹಿಸಿದಳು. ಮಹತ್ವಾಕಾಂಕ್ಷಿಯಾಗಿದ್ದ ನೂರಜಹಾನಳು ಕೇವಲ ಎರಡೇ ವರ್ಷದಲ್ಲಿ ಅಧಿಕಾರವನ್ನೆಲ್ಲಾ ತನ್ನ ಕೈಗೆ ತಗೆದುಕೊಂಡು “ಬಾದಶಹಾ ಬೇಗಂ” ಎಂಬ ಬಿರುದನ್ನು ಪಡೆದು ಮೊಘಲ್ ಇತಿಹಾಸದಲ್ಲಿ ಆಡಳಿತ ನಡೆಸಿದ ಧೀಮಂತ ಮಹಿಳೆಯಾಗಿದ್ದಾಳೆ. ದಯಾಳು, ಬಡಜನರ ಕೈವಾರಿ, ಅನಾಥ ರಕ್ಷಕಳು, ಜನಾನುರಾಗಿ, ಅಪ್ರತೀಮ ಧೈರ್ಯಶಾಲಿ, ಶ್ರೇಷ್ಠ ಸಾಹಿತಿಯು ಯಾಗಿದ್ದಳು.

**2. ಪ್ರಾರಂಬಿಕ ಜೀವನ.**

ನೂರಜಹಾನಳ ಪೂರ್ವನಾಮ “ಮೆಹರುನ್ನಿಸಾ” ಇವಳ ತಂದೆ ಪರ್ಶಿಯಾದ ತೆಹರಾನ ಪ್ರಾಂತದ ಮಿರ್ಜಾ ಘಿಯಾಸಬೇಗ್. ಇವನು ಅಲ್ಲಿಯ ರಾಜಕೀಯ ಗೊಂದಲದಿಂದಾಗಿ ಉದ್ಯೋಗ ಹುಡುಕುತ್ತಾ ಭಾರತಕ್ಕೆ ವಲಸೆ ಬಂದನು. ಮಾರ್ಗಮಧ್ಯದಲ್ಲಿ ಇತನ

ಹೆಂಡತಿ ಅಸ್ಮತ್ ಬೇಗಮಳು ಕ್ರಿ.ಶ. 1577 ರಲ್ಲಿ "ಮೆಹರುನ್ನಿಸಾ " ಳನ್ನ ಜನ್ಮ ನೀಡಿದಳು. "ಮೆಹರುನ್ನಿಸಾ " ಅಂದರೆ "ಸ್ತ್ರೀಕುಲದ ಸೂರ್ಯ "

ಘಿಯಾಸಬೇಗನು ಭಾರತಕ್ಕೆ ಬಂದು ಅಕ್ಬರನ ಸೇವೆಯಲ್ಲಿ ಸೇರಿ ಕಾಲಕ್ರಮೇಣ 300 ರ ಮನ್ಸಬ್ದಾರನಾಗಿ ಬಡ್ತಿ ಪಡೆದನು. ಮಗಳಿಗೆ ಶ್ರೇಷ್ಠ ಶಿಕ್ಷಕರಿಂದ ಪರ್ಶಿಯನ್, ಅರೇಬಿಕ್, ಉರ್ದು ಮತ್ತು ಹಿಂದಿ ಭಾಷೆಗಳನ್ನು, ರಾಜ್ಯಶಾಸ್ತ್ರ, ಅರ್ಥಶಸ್ತ್ರ, ಆಡಳಿತ, ಮತ್ತು ತತ್ವಜ್ಞಾನವನ್ನು ಕಲಿಸಿದನು. ಅತ್ಯಂತ ಆಸಕ್ತಿಯಿಂದ ಕಲಿತಳು.

**3. ಗುಣ ವಿಶೇಷಗಳು.**

1.) ಅಪರೂಪದ ಲಾವಣ್ಯವತಿ, ಅಸಮಾನ್ಯ ಅಂಗಸೌಷ್ಠವ ಹೊಂದಿದ್ದಳು. ಹೊಸ, ಹೊಸ ನಮೋನೆಯ ಪೋಷಾಕುಗಳನ್ನು, ಸೌಂಧರ್ಯವರ್ಧಕ ಸಾಧನಗಳನ್ನು, ಚಿನ್ನಾರತ್ನ ಆಭರಣಗಳನ್ನು ಕಂಡುಹಿಡಿದು ಹೊಸ ಅಲಂಕಾರ ಶೈಲಿಗಳನ್ನು ಕಂಡುಹಿಡಿದು, ಅದನ್ನು ಬಳಿಸಿ, ಪ್ಯಾಶನ್ ಪ್ರಪಂಚದಲ್ಲಿ ಅದ್ವಿತಿಯಳಾಗಿದ್ದಳು. ಇವಳು ಬಳಿಸಿದ ಪ್ಯಾಶನ್ ಬಹು ಕಾಲ ಅಸ್ತೀತ್ವದಲ್ಲಿತ್ತು.

ಇವಳನ್ನು ಹತ್ತಿರದಿಂದ ನೋಡಿದ ಬ್ರಿಟಿಷ ರಾಯಭಾರಿ ಹಾಕಿನ್ಸ ಮತ್ತು ಥಾಮಸ್ ರೋರವರು " ನಾವು ಇವಳಿಗೆ ನೋಡಿದಾಗ ಅವಳ ವಯಸ್ಸು 45 ಅಂದರೆ ನಮಗೆ ನಂಬಲಿಕ್ಕೆ ಆಗಲಿಲ್ಲ ಆಗ ಅವಳಿಗೆ 20-22 ವಯಸ್ಸಿರಬೇಕು ಎಂದು ಅನಿಸುತ್ತಿತ್ತು. "ಇವಳ ಸೌಂದ್ಯರ್ಯಕ್ಕೆ ಮತ್ತು ಪ್ಯಾಶನಿಗೆ ಇವಳ ವಯಸ್ಸು ಸಹ ನಾಚುತಿತ್ತು " ಎಂದು ವರ್ಣಿಸಿದ್ದಾರೆ.

2.) ಸ್ವಂತ ಕಾವ್ಯ ರಚಿಸಿತ್ತಾ ಶ್ರೇಷ್ಠ ಕವಿಯಾದಳು. ಸಂಗೀತದಲ್ಲಿ ನಿಸ್ಸಮಳಾಗಿದ್ದಳು ಚಿತ್ರಕಲೆಯಲ್ಲಿಯೂ ಅದ್ವಿತಿಯಳಾಗಿದ್ದಳು

3.) ರಾಜಕೀಯ ಚತುರತೆಯಲ್ಲಿಯಲ್ಲಿ, ಆರ್ಥಿಕ ಚಿಂತನೆಯಲ್ಲಿ ಮತ್ತು ತತ್ವಜ್ಞಾನದಲ್ಲಿ ಇವಳು ಮಹಾಪಂಡಿತಳಂತೆ ಜ್ಞಾನ ಹೊಂದಿದ್ದಳು.

4.) ಅತ್ಯಂತ ಧೈರ್ಯಶಾಲಿಯಾಗಿ, ಕುದುರೆ ಸವಾರಿ, ಕತ್ತಿವರೆಸೆ ಮತ್ತು ರಣನೀತಿ ರೂಪಿಸುವದರಲ್ಲಿ ನಿಸ್ಸಮಳಾಗಿದ್ದಳು.

5.) ಉದಾರತೆ, ದಾನಕ್ಕೆ, ಬಡಜನರ ಕೈವಾರಿಯಾಗಿದ್ದಳು. ಅನಾಥ ಹೆಣ್ಣು ಮಕ್ಕಳ ವಿವಾಹ ವೆಚ್ಚವನ್ನು ತಾನೇ ವಹಿಸುತ್ತಿದ್ದಳು. ಪ್ರತಿದಿನ ಬಡಜನರಿಗೆ ವೃದ್ಧರಿಗೆ, ಅಂಗವಿಕಲರಿಗೆ ಆಶ್ರಮ ನಡೆಸುತ್ತಿದ್ದಳು.ಹೀಗೆ ಜನಾನೂರಾಗಿ ಜನೂಪಕಾರಿಯಾಗಿ ಕಾರ್ಯ ನಿರ್ವಹಿಸುತ್ತದ್ದಳು.

4. ಸಲೀಮ್ ನೊಡನೆ ಪ್ರೇಮಾಂಕುರ ಮತ್ತು ಅಗುಲುವಿಕೆ.

ಸೌಂಧರ್ಯ ಆರಾಧಕನಾಗಿದ್ದ ರಾಜಕುಮಾರ ಸಲೀಮ್ ಅಪ್ರತೀಮ ಸೌಂದರ್ಯವತಿ "ಮೆಹರುನ್ನಿಸಾ " ಳನ್ನ ಕಂಡು ಮೊದಲ ನೋಟದಲ್ಲಿಯೇ ಪ್ರೀತಿಸಲಾರಂಬಿಸಿದನು. ಮದುವೆಯಾಗಲೂ ಸಿದ್ದತೆ ಮಾಡಿಕೊಂಡಿದ್ದನು. ಆದರೆ, ಅಕ್ಬರನು ಈ ಮದುವೆಗೆ ವಿರೋಧಿಯಾಗಿದ್ದನು. ಮದುವೆ ಎಂಬುವದು ರಾಜಕಾರಣ ಒಂದು ಭಾಗ ಎಂದು ನಂಬಿದ್ದ ಅಕ್ಬರನು ಒಬ್ಬ ಸೇವಕನ ಮಗಳ ಜೋತೆ ರಾಜಕುಮಾರ ಮದುವೆ ಪ್ರತಿಷ್ಠೆಗೆ ಕುಂದು ಎಂದು ತಿಳಿದಿದ್ದನು. ಅದಕ್ಕಾಗಿ ಕಾಬೂಲ್-ಕಂದಹಾರ ಯುದ್ಧದಲ್ಲಿ ರಾಜಕುಮಾರ ಸಲೀಮ್‌ನನ್ನು ಕಳುಹಿಸಿ, ಇತ್ತ 1599 ರಲ್ಲಿ "ಮೆಹರುನ್ನಿಸಾಳನ್ನು ಅಫಘನ್ ದಳಪತಿ ಅಲಿಕುಲಿಖಾನನ ಜೋತೆ ಮದುವೆ ಮಾಡಿಸಿ, ಅವನನ್ನು ಬಂಗಾಳದ ಫೌಜದಾರನ್ನಾಗಿ ನೇಮಕ ಮಾಡಿ, ಬರದ್ವಾಜದ ಜಹಗೀರ ನೀಡಿ ಅಲ್ಲಿಗೆ ಕಳುಹಿಸಿದನು.

**5. ಮತ್ತೆ ಪ್ರಮೀಗಳ ಮಿಲನ**

ಕ್ರಿ.ಶ.1611 ರಲ್ಲಿ ರಾಜಕುಮಾರ ಸಲೀಮ್ ನು ಬಾದಷಹಾ ಜಹಾಂಗೀರನಾದ ಮೇಲೆ ಬಂಗಾಳದಲ್ಲಿ ಅಫಘನರು ದಂಗೆ ಎದ್ದಾಗ ಕುತುಬುದ್ದನ್ ನನ್ನು ಮೊಘಲ್ ಸೈನ್ಯದ ನಾಯಕತ್ವ ವಹಿಸಿ ಕಳುಹಿಸಿಕೊಟ್ಟನು. ಇವನು ಅಲ್ಲಿಯ ದಂಗೆಯನ್ನು ಅಡಗಿಸಿ, ಅಲಿಕುಲಿಖಾನನ ಮೇಲೆ ರಾಜದ್ರೋಹದ ಅಪಾದನೆ ಹೋರಿಸಿ, ಅವನನ್ನು ಕೊಂದು, ಅವನ ವಿಧುವೆ ಹೆಂಡತಿ "ಮೆಹರುನ್ನಿಸಾ " ಳನ್ನು ಮತ್ತು ಅವಳ ಮಗಳು ಲಾಡಲಿಬೇಗಮ್ ಳನ್ನು ದೆಹಲಿಗೆ ಕಳುಹಿಸಿಕೊಟ್ಟನು. ಇವಳು ಅಕ್ಬರನ ವಿಧುವೆಯಾದ ಸಲೀಮಾಬೇಗಮಳ ಪರಿಚಾರಕಳಾಗಿ ನೇಮಕಳಾದಳು. ಕ್ರಿ.ಶ. 1611 ರಲ್ಲಿ 42 ವಯಸ್ಸಿನ ಜಹಾಂಗೀರ 35 ವಯಸ್ಸಿನ "ಮೆಹರುನ್ನಿಸಾ " ಳನ್ನು ಮದುವೆಯಾದನು. ಅವಳ ಸೌಂಧರ್ಯಕ್ಕೆ ಮಾರು ಹೋಗಿ ಅವಳನ್ನು ಪಟ್ಟದರಸಿ ಬಾದಷಹ ಬೇಗಮ್

ಳಾಗಿ ಮಾಡಿ, ಮೊದಲು ಅವಳಿಗೆ "ನೂರಮಹಲ್ (ಅರಮನೆಯ ಬೆಳಕು) ನಂತರದಲ್ಲಿ ನೂರಜಹಾನ (ಜಗತ್ತಿನ ಬೆಳಕು) ಎಂದು ಕರೆದು ಅವಳಲ್ಲಿ ಅನುರಕ್ತನಾದನು.

**6. 1611 ರಿಂದ 1622 ರವರೆಗಿನ ಅವಳ ಉತ್ಕರ್ಷ ದಿನಗಳು.**

ಜಹಾಂಗೀರನನ್ನು ಮದುವೆಯಾದ ಮೇಲೆ ಬಾದಷಹ ಬೇಗಮ್ ನೂರುಜಹಾಳು ಬಾದಷಹಾನ ಮನಸ್ಸನ್ನು ಗೆದ್ದು ಆಡಳಿತದಲ್ಲಿ ಸಲಹೆಗಳನ್ನು ನೀಡುತ್ತಾ ನೇರವಾಗಿ ಆಡಳಿತದಲ್ಲಿ ಭಾಗವಹಿಸಲಾರಂಬಿಸಿದಳು. ಅವಳ ರಾಜಕೀಯ ಬುದ್ದಿವಂತಿಗೆ, ಆಡಳಿತ ಜ್ಞಾನ ನೋಡಿ ಮರುಳಾಗಿ ಆಲಸಿಯಾದ ಜಹಾಂಗೀರ ಸಂಪೂರ್ಣ ಆಡಳಿತಾಧಿಕಾರವನ್ನು ಅವಳಿಗೆ ನೀಡಿ ಅವಳ ಕೈಗೊಂಬೆಯಾದನು. ಈ ಅವಧಿಯ ಕಾರ್ಯ ಚಟುವಟಿಕೆಗಳು ಇಂತಿವೆ.

1.) ತನ್ನ ತಂದೆ ಮಿರ್ಜಾ ಘಿಯಾಸಬೇಗನಿಗೆ 10000 ಮನ್ಸಬ್ದಾರನಾಗಿ ಮಾಡಿ, ಸಾಮ್ರಾಜ್ಯ ಪ್ರಧಾನ ಮಂತ್ರಿಯಾಗಿ ನೇಮಕ ಮಾಡಿದಳು.

2.) ತನ್ನ ಸಹೋದರನಾದ ಅಸಪಖಾನನಿಗೆ 5000 ಮನ್ಸಬ್ದಾರನಾಗಿ ಮಾಡಿ, ಕಂದಾಯ ಮಂತ್ರಿಯಾಗಿ ನೇಮಕ ಮಾಡಿದಳು.

3.) ರಾಜಕುಮಾರ ಖರ್ರಮ್‌ನ ಸಹಾಸಗಳನ್ನು ಮೆಚ್ಚಿ, ಮೊದಲು ಷಹಾಖುರ್ರಂ ನಂತರ ಷಹಜಹಾನ ಎಂಬ ಬಿರುದುಗಳನ್ನು ಮತ್ತು ಅಪಾರ ಜಹಗೀರುಗಳನ್ನು ನೀಡಿ ಗೌರವಿಸಿದಳು. 12000 ಮನ್ಸಬ್ದಾರನನ್ನಾಗಿ ನೇಮಕ ಮಾಡಿದಳು. ಸಹೋದರನಾದ ಅಸಫಖಾನನ ಮಗಳು ಮುಮ್ತಾಜ್ ಬೇಗಮ್‌ಳ ಜೋತೆ ಮದುವೆ ಮಾಡಿಸಿದಳು.

4.) ರಾಜಕುಮಾರ ಫರ್ವೆಜನಿಗೆ 12000 ಮನ್ಸಬ್ದಾರ ಮಾಡಿ, ಅನೇಕ ಯುದ್ಧಗಳಲ್ಲಿ ಭಾವಹಿಸಲು ಪ್ರೊತ್ಸಹಿಸಿ, ಅವನ ಪ್ರೀತಿ-ಗೌರವ ಪಡೆದಳು

5.) ಜಹಾಂಗೀರನ ಅತ್ಯಂತ ನಿಷ್ಠವಂತಾಳಾಗಿ ಅವನ ಸುಮಾರಿತನ, ಆಲಸಿತನ, ಕುಡಿತ ಕಡಿಮೆ ಮಾಡಿಸಿ, ಅವನ ದೇಹಾರೋಗ್ಯ ಸುಧಾರಿಸಿ, ದರಬಾರನಲ್ಲಿ ಅವನ ಪ್ರತೀಷ್ಠೆಯನ್ನು ಹಿಚ್ಚಿಸಿದಳು.

6.) ಆಸ್ಥಾನ ಸಭೆ ದರಬಾರನ್ನು ಹೊಸ ಪೀಟೋಪಕರಣಗಳಿಂದ, ಹೊಸ ಅಲಂಕಾರ-ವಸ್ತ್ರಾಭರಣಗಳಿಂದ ಮತ್ತು ಸುಗಂಧ ದ್ರವ್ಯಗಳಿಂದ ಸುಂದರತಾಣವಾಗಿ ಅದರ ಘನತೆಯನ್ನು ಹೆಚ್ಚಿಸಿದಳು.

7.) ಆಡಳಿತದಲ್ಲಿ ದಕ್ಷತೆ ಮತ್ತು ಮಿತ ವ್ಯಯ ಸಾಧಿಸಿ ರಾಜಬೊಕ್ಕಸದ ಆದಾಯ ಹೆಚ್ಚಿಸಿದಳು.

7. 1622 ರ ನಂತರದ ಅವಳ ಮಹತ್ವಾಕಾಂಕ್ಷೆ ದಿನಗಳು.

ಕ್ರಿ.ಶ 1622 ರ ನಂತರ ಜಹಾಂಗೀರನ ಆರೋಗ್ಯ ಕ್ಷೀಣಿಸಲಾರಂಬಿಸಿತು. ಇದೇ ಸಮಯದಲ್ಲಿ ರಾಜಕೀಯ ಸಲಹೇಗಾರ ಹಾಗೂ ಪ್ರಧಾನಿ ಮಂತ್ರಿಯಾಗಿದ್ದ ಇವಳ ತಂದೆ ಘಿಯಾಸಬೇಗ್ ಮರಣ ಹೊಂದಿದನು. ಇದರಿಂದ ಆಧಿಕಾರದ ರುಚಿ ಕಂಡ ನೂರಜಹಾನಳು ತನ್ನ ಅಧಿಕಾರ ಶಾಶ್ವತಗೊಳಿಸಿಕೊಳ್ಳಲು ಪ್ರಯತ್ನಶೀಲಳಾದಳು.

1) ರಾಜಕೀಯ ಚತುರನಾದ, ಮುತ್ಸದ್ಧಿಯಾದ, ಯುದ್ಧನೀಪುಣನಾದ, ಮಹತ್ವಾಕಾಂಕ್ಷಿಯಾದ ಮತ್ತು ಮುಂದಿನ ಬಾದಷಹ ಎಂತಲೇ ಪ್ರಸಿದ್ಧನಾಗಿದ್ದ ಖರ್ರಮ್‌ನು (ಷಹಜಹಾನ) ತನ್ನ ಅಧಿಕಾರಕ್ಕೆ ಮುಳುವಾಗಬಹುದೆಂದು ಅವನ ಶಕ್ತಿಯನ್ನು ಮತ್ತು ಜನಪ್ರೀಯತೆಯನ್ನು ಕಡಿಮೆ ಮಾಡಲು ಅವನನ್ನು ರಾಜಕೀಯದಿಂದ ದೂರವಿಡಲು ಪ್ರಯತ್ನಿಸಿ ದೂರದ ಮಾಂಡುವಿನ ರಾಜ್ಯಪಾಲನಾಗಿ ನೇಮಿಸಿದಳು.

2.) ಷಹಜಹಾನ ಮಾವ ಹಾಗೂ ತನ್ನ ಸಹೋದರನು ಆದ ಅಸಫಖಾನನು ತನ್ನ ಮಗಳನ್ನು ಖರ್ರಮ್‌ನಿಗೆ ಕೊಟ್ಟು ಮದುವೆ ಮಾಡಿದ್ದರಿಂದ ಇವನು ತನ್ನ ಅಳಿಯನ ಬೆಂಬಲಕ್ಕೆ ನಿಲ್ಲಬಹುದೆಂಬ ಭಯದಿಂದ ಅವನ ಪ್ರತಿಸ್ಪರ್ಧಿಯಾದ ಮಹಬತ್ ಖಾನನ ಬಲ ಹೆಚ್ಚಿಸಿದಳು.

3.) ರಾಜಕೀಯವಾಗಿ ಅಸಮರ್ಥನನು, ದುರ್ಬಲನು ಆಗಿದ್ದ ಶಾರೀಯರನಿಗೆ ತನ್ನ ಮೊದಲ ಗಂಡನ ಮಗಳಾದ ಲಾಡಲಿಬೇಗಮಳನ್ನು ಕೊಟ್ಟು ಮದುವೆ ಮಾಡಿಸಿ, ಅವನನ್ನು ಉತ್ತರಾಧಿಕಾರಿಯಾಗಿ ನೇಮಿಸಿ ಅವನನ್ನು ಬಾದಷಹಾ ಮಾಡಿದರೆ, ತನ್ನ ಅಧಿಕಾರ ಶಾಶ್ವತವಾಗಿ ಉಳಿಯುವ ಯೋಜನೆಯಿಂದಾಗಿ ಮದುವೆ ಮಾಡಿಸಿದಳು.

**8. ಷಹಜಹಾನನ ದಂಗೆ ಮತ್ತು ದಮನ.**

1..) ತಂದೆಯ ಆರೋಗ್ಯ ಕ್ಷೀಣಿಸಿದ್ದು, ಮತ್ತು ಅವನ ಸಂದರ್ಶನ ವಿರಳಗೊಳಿಸಿದ್ದು ಅವನಿಗೆ ಸಂಶಯ ಉಂಟಾಯಿತು.

2.) ತನ್ನ ಮಾವನಾದ ಅಸಫಖಾನನ ಪ್ರತಿಸ್ಪರ್ಧಿಯಾದ ಮಹಬತ್‌ಖಾನನಿಗೆ ಹೆಚ್ಚಿನ ಬೆಂಬಲ ನೀಡಿದ್ದು ಅಸಮದಾನಕ್ಕೆ ಕಾರಣವಾಯಿತು.

3.) ಖರ್ರಮನ ವಿಶೇಷ ಅಧಿಕಾರ ಮತ್ತು ಜಹಗೀರುಗಳನ್ನು ರದ್ದು ಗೊಳಿಸಿದ್ದು.

4.) ಖರ್ರಮ್‌ನ ಬೆಂಬಲಿಗರನ್ನು ದೂರದ ಪ್ರದೇಶಗಳಿಗೆ ವರ್ಗಾವಣೆ ಮಾಡಿಸಿ, ಅವನ ಸಂದರ್ಶನ ವಿರಳ ಗೋಳಿಸಿದನು.

5.) ಫರ್ವೇಜಜನಿಗೆ ವಿಶೇಷ ಜಹಗೀರುಗಳನ್ನು ನೀಡಿ, ತನ್ನ ಬೆಂಬಲಕ್ಕೆ ಸಳೆದುಕೊಂಡಳು.

6.) ದೂರದ ಕಂದಹಾರದ ದಂಗೆಯನ್ನಡಗಿಸಲು ನೇಮಿಸಿ ಜಹಾಂಗೀರನಿಂದ ರಾಜಾಜ್ಞೆಯನ್ನು ನೀಡಿಸಿದಳು.

ಇದರಿಂದ ಅಸಮದಾನಗೊಂಡ ಷಹಾಜಹಾನ ತಂದೆಯ ಮತ್ತು ನೂರಜಹಾನಳ ವಿರುದ್ಧ ದಂಗೆಯೆದ್ದು, ಫತೇಪುರ ಸಿಕ್ರಿಯ ಮೇಲೆ ದಾಳಿ ಮಾಡಿದನು. ಆದರೆ ನೂರಜಹಾನಳು ಫರ್ವೇಜಜ ಮತ್ತು ಮಹಬತ್‌ಖಾನನ ನಾಯಕತ್ವದಲ್ಲಿ ಷಹಜಹಾನನ್ನು ಎದುರಿಸಲು ಬೃಹತ್ ಸೈನ್ಯ ಕಳುಹಿಸಿದಳು. ನಾಲ್ಕು ವರ್ಷಗಳ ಕಾಲ ಹೋರಾಡಿ ತನ್ನ ಹಣ, ಸಂಪತ್ತು, ಶಕ್ತಿಯನ್ನ ಕಳೆದುಕೊಂಡು, ಆರೋಗ್ಯ ಹಾಳು ಮಾಡಿಕೊಂಡ ಷಹಜಹಾನ ತನ್ನ ಮಾವನ ಸಲಹೆಯಂತೆ ಬೇಸರತ್ತಾಗಿ ಶರಣಾಗತನಾದನು. ಬೆಂಬಲವಾಗಿ ತನ್ನ ಮಕ್ಕಳಾದ ಧಾರ ಮತ್ತು ಔರಂಗಜೇಬರನ್ನು ವತ್ತೆಯಾಗಿ ರಾಜಧಾನಿಗೆ ಕಳುಹಿಸಿದನು.

**9. ಮಹಬತ್‌ಖಾನನ ದಂಗೆ ಮತ್ತು ದಮನ.**

ಮಹತ್ವಾಕಾಂಕ್ಷಿಯಾದ ಮಹಬತ್‌ಖಾನ ತನ್ನ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು, ತನ್ನ ಮಗಳನ್ನು ಫರ್ವೇಜಜನಿಗೆ ನೀಡಿ ಮದುವೆ ಮಾಡಿಸಿದನು. ಮುಂದೆ ಫರ್ವೇಜಜನನ್ನೆ ಬಾದಷಹ ಮಾಡವ ಆಸಕ್ತಿಯನ್ನ ವಹಿಸಿ ಯೋಜನೆ ರೂಪಿಸಲಾರಂಬಿದನು. ಇದರಿಂದ ತನ್ನ ಅಳಿಯ ಶಾರೀರನಿಗೆ ಉತ್ತರಾಧಿಕಾರತ್ವ ನೀಡುವ ಬಯಕೆಯಲ್ಲಿದ್ದ ನೂರಜಹಾನಳಿಗೆ ಮಹಬತ್ ಖಾನ ಮುಳುವಾದನು. ಇದರಿಂದ

1.) ಮಹಬತ್‌ಖಾನನಿಗೆ ದೂರದ ಬಂಗಾಳಕ್ಕೆ ರಾಜ್ಯಪಾಲನನ್ನಾಗಿ ಬಡ್ತಿ ನೀಡಿ ವರ್ಗಾವಣೆ ಮಾಡಿಸಿದಳು.

2.) ಫರ್ವೇಜಜನಿಗೆ ಕಾಬೂಲದ ರಾಜ್ಯಪಾಲನನ್ನಾಗಿ ನೇಮಿಸಿ ದೂರ ಇಟ್ಟಳು.

3.) ತನ್ನ ಬೆಂಬಲಕ್ಕೆ ತನ್ನ ಸಹೋರದನಾದ ಅಸಫಖಾನನ್ನು ದಿವಾನನನ್ನಾಗಿ ನೇಮಿಸಿದಳು.

4.) ಮುಂದೆ ಮಹಬತ್ ಖಾನನ ಮೇಲೆ ರಾಜದ್ರೋಹದ ಅಪಾದನೆ ಹೊರಿಸಿ, ಅವನನ್ನು ಬಂಧಿಸಲು ಆಜ್ಞೆಯನ್ನು ಹೊರಡಿಸಿದಳು, ಸಹೋದರ ಅಸಫಖಾನನ ಬೆಂಬಲ ಪಡೇದು ದಂಗೆಯೆದ್ದ ಮಹಬತಖಾನನನ್ನು ಬಂಧಿಸಿ ಸೆರೆಮನೆಗೆ ತಳ್ಳಿದಳು.

**10. ಕೊನೆಯ ದಿನಗಳು ಮತ್ತು ಮರಣ.**

ಒಳ್ಳೆಯ ಸ್ಥಾನದಲ್ಲಿದ್ದ ಅಸಫಖಾನ ನೂರಜಹಾನಳ ಪಕ್ಕ ಬೆಂಬಲಿಗನಂತೆ ನಟಿಸುತ್ತಾ ಷಹಜಹಾನನ ಪರವಾಗಿದ್ದ ಅನೇಕ ದಂಡನಾಯಕರುಗಳನ್ನು ಆಯಕಟ್ಟಾದ ಹುದ್ದೆಗಳಿಗೆ ನೇಮಿಸಿ ರಹಸ್ಯವಾಗಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡನು. ಜಹಾಂಗೀರ ಇನ್ನೂ ಹೆಚ್ಚು ಬದಕುವದಿಲ್ಲವೆಂದು ತಿಳಿದ ಮೇಲೆ ಶಾರೀಯರನನ್ನು ಲಾಹೋರದ ದಂಗೆಯನ್ನಡಗಿಲು ಕಳುಹಿಸಿದನು. ಮತ್ತು ದಕ್ಷಿಣದಲ್ಲಿದ್ದ ತನ್ನಳಿಯನಾದ ಷಹಜಹಾನನನ್ನು ಶೀಘ್ರವಾಗಿ ದೆಹಲಿಗೆ ಬರಲು ಸೂಚಿಸಿದನು. ಕಾಶ್ಮೀರದಿಂದ ವಾಪಸ ಬರುವಾಗ 1627 ನವ್ವಂಬರ 23 ರಂದು ಭೀಮಬರ ಎಂಬಲ್ಲಿ ಜಹಾಂಗೀರ ಮರಣ ಹೊಂದಿದನು. ನೂರಜಹಾನ ಶೋಕಚರಣೆಯಲ್ಲಿರುವಾಗ ಅವಳ ವಶದಲ್ಲಿದ್ದ ಧಾರಾ ಮತ್ತು ಔರಂಗಜೇಬರನ್ನು ತನ್ನ ವಶಕ್ಕೆ ತಗೆದುಕೊಂಡನು. ಶಾರೀಯರನನ್ನು ದೆಹಲಿಗೆ ಬರುವಂತೆ ಹೇಳಿ

ದಾರಿ ಮಧ್ಯದಲ್ಲಿಯೇ ಅವನನ್ನು ಬಂದಿಸಿ ಕೊಂದು ಹಾಕಿದನು. ಖುಸ್ರುವಿನ ಮಕ್ಕಳನ್ನು ಮತ್ತು ರಾಜಕುಟುಂಬದ ಎಲ್ಲಾ ವಾರಸುದಾರರನ್ನು ರಾತ್ರೋರಾತ್ರಿ ಕಗ್ಗೊಲೆ ಮಾಡಿಸಿದನು. ನೂರಜಹಾನಳ ಅರಿವಿಗೆ ಬರುವದಕ್ಕಿಂತ ಮುಂಚೆಯೇ ಷಹಜಹಾನನು ಉತ್ತರಾಧಿಕಾರಿಯಾಗಿ ನೇಮಿಸಿ, ಬಾದಷಹಾ ಎಂದು ಘೋಷಣೆ ಮಾಡಿದನು. ವಿಧುವೆ ನೂರಜಹಾನಳನ್ನು ಮತ್ತು ಅವಳ ವಿಧುವೆ ಮಗಳಿಗೆ ವಾರ್ಷಿಕ 2 ಲಕ್ಷ ರೂಪಾಯಿಗಳನ್ನು ನೀಡಿ ಗೃಹ ಬಂದನದಲ್ಲಿರಿಸಿದನು. ಮುಂದೆ 1645 ರಲ್ಲಿ ನೂರಜಹಾನಳು ಮರಣ ಹೊಂದಿದಳು.

**11. ಉಪಸಂವಾರ**

ಸಾಮಾನ್ಯಳಾಗಿ ಹುಟ್ಟಿದ ಮೆಹರುನ್ನಿಸಾ ಬೇಗಂ ತನ್ನ ಅಪ್ರತೀಮ ಸೌಂದರ್ಯಚತುರತೆಯಿಂದ, ಲಾವಣ್ಯ ನಿಷ್ಠೆಯಿಂದ ಜಹಾಂಗೀರ ಮನವೂಲಿಸಿ "ನೂರಮಹಲ್" ನೂರ್‌ಜಹಾನ್ ಬಾದಷಾಬೇಗಂಳಗಿ ಭಾರತದ ಚರಿತ್ರೆಯಲ್ಲಿ ಮಿಂಚಿದ ಮಹಿಳೆಯಾಗಿದ್ದಾಳೆ. ಇವಳು ಅಧೀಕಾರದಾಹಿಯಾಗಿದ್ದು, ಬೇರೆಯವರ ಉನ್ನತಿಯನ್ನು ಸಹಿಸುತ್ತಿರಲಿಲ್ಲ. ಇದರಿಂದಾಗಿ ಷಹಜಹಾನ ಮತ್ತು ಮಹಬತ್ ಖಾನರು ಬಂಡೆದ್ದರು

ನೂರಜಹಾನಳ ಗುಣಾವಗುಣಗಳು ಏನೇ ಇದ್ದರೂ ಅವಳು ಸಾಮಾನ್ಯಳಾಗಿ, ಸಾಮ್ರಾಜ್ಯಾಜ್ಞೆಯ ಪದವಿಗೇರಿ, ತನ್ನ ಸೌಂದರ್ಯ, ಸೊಬಗು, ಲಾವಣ್ಯ, ಪ್ರತಿಭೆ, ಔದರ್ಯ, ಚತುರತೆ, ವಸ್ತ್ರಾಲಂಕಾರದಿಂದ ಎಲ್ಲರ ಮನಸ್ಸನ್ನು ಆಕರ್ಷಿಸಿದ್ದಳು. ಹೆಣ್ಣಾಗಿದ್ದರೂ ಕೆಚ್ಚೆದೆಯಿಂದ ಆಡಳಿತ ನಡೆಸಿದ್ದು ಅವಳ ವ್ಯಕ್ತಿತ್ವದ ಘನತೆಯಾಗಿದೆ.